# 1.ಕೃತಿ (Activity )

ಕೃತಿ ಎಂದರೆ ಮನಸ್ಸಿನ ಪ್ರಕ್ರಿಯೆಯಿಂದ ನಡೆಯುವ ಪ್ರತ್ಯಕ್ಷ ಕಾರ್ಯವಾಗಿದೆ. ವಿಚಾರಗಳ ಹೊಂದಾಣಿಕೆ, ನಿರೀಕ್ಷಣೆ, ಪರೀಕ್ಷೆ, ಸಹ-ಸಂಬಂಧವನ್ನು ತಿಳಿದುಕೊಂಡು ಮಾತು, ಬರವಣಿಗೆಗಳ ಮೂಲಕ ಅಭಿವ್ಯಕ್ತಿಗೊಳಿಸುವುದೇ ಕೃತಿ. ಕೃತಿಗಳಿಂದ ಭಾಷಾ ಕೌಶಲ್ಯಗಳ ವಿಕಾಸವಾಗುತ್ತದೆ. ವಿಶಿಷ್ಟ ಉದ್ದೇಶಕ್ಕಾಗಿ ಮಾಡಿದ ಕಾರ್ಯವೇ ಕೃತಿ.

ಕಂಠಪಾಠ ಮಾಡುವ ಆತಂಕದಿಂದ ವಿದ್ಯಾರ್ಥಿಗಳನ್ನು ದೂರಮಾಡಿ, ಆನಂದದ ವಾತಾವರಣದಲ್ಲಿ ಕೃತಿ ಸ್ವರೂಪದ ಅಂದರೆ ವಿದ್ಯಾರ್ಥಿಗಳು ಹೆಚ್ಚು ಸಹಭಾಗದಿಂದ ಕಲಿಸುವ ಹೊಸ ಪ್ರಯತ್ನ ಇಲ್ಲಿ ನಡೆದಿದೆ. ವಿವಿಧ ಭಾಷಾ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳು ಸ್ವತಃ ಭಾಷೆಯ ಕೌಶಲ್ಯಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಈ ಪದ್ಧತಿಯ ಮೂಲಕ ವಿದ್ಯಾರ್ಥಿಗಳ ನಿರ್ಣಯ ಕ್ಷಮತೆ, ಮೌಲ್ಯಾಧಾರಿತ ಭಾಷಾ ಕಲಿಕೆ, ವಿಚಾರ ಪ್ರವೃತ್ತರಾಗುವ ಗುಣ, ಆತ್ಮವಿಶ್ವಾಸ, ಸಮಸ್ಯೆ-ಸವಾಲುಗಳನ್ನು ಎದುರಿಸುವ ಉತ್ತಮ ಕೌಶಲ್ಯಗಳನ್ನು ಬೆಳೆಸಲು ಸಾಧ್ಯವಾಗುತ್ತದೆ.

ಕೃತಿಗಳ ಮೂಲಕ Higher Order Thinking Questions (Hot) ಉಚ್ಚ ಮಟ್ಟದಲ್ಲಿ ವಿಚಾರ ಮಾಡುವುದಕ್ಕೆ ಪ್ರೇರಣೆ ನೀಡುವಂತಹ ಪ್ರಶ್ನೆಗಳನ್ನು ಕೇಳಬಹುದು. ಮಾನಸಿಕ ಸಾಮರ್ಥ್ಯ, ಕಲ್ಪನೆಗೆ ಮುಕ್ತ ಅವಕಾಶ, ತಾರ್ಕಿಕ ಕ್ಷಮತೆ, ಸೃಜನಾತ್ಮಕತೆ, ಸ್ವತಂತ್ರ ಅಭಿವ್ಯಕ್ತಿಗೆ ಇಲ್ಲಿ ಒತ್ತು ನೀಡಲಾಗಿದೆ. ಈ ಮೂಲಕ ಜ್ಞಾನರಚನಾವಾದಕ್ಕೆ ಮೌಲ್ಯಮಾಪನದಲ್ಲಿ ಒಳ್ಳೆಯ ಸ್ಥಾನ ನೀಡಬಹುದು.

ಪರೀಕ್ಷೆ ಇದು ವ್ಯಕ್ತಿತ್ವವನ್ನು ಅರಳಿಸುವುದಕ್ಕೆ ಅಂತಿಮ ಸಾಧನವಲ್ಲ. ಕೃತಿಯುಕ್ತ ಪರೀಕ್ಷೆಗಳ ಮೂಲಕ ವ್ಯಕ್ತಿತ್ವ ವಿಕಾಸಕ್ಕೆ ಪ್ರೋತ್ಸಾಹ ನೀಡುವ ಯತ್ನ ಇಲ್ಲಿ ನಡೆದಿದೆ. ಪರೀಕ್ಷೆಯು ಅನೌಪಚಾರಿಕತೆ ಪಡೆದು, ವಿದ್ಯಾರ್ಥಿಗಳು ಉತ್ಸಾಹದಿಂದ ಕಲಿಯುವವದರಲ್ಲಿ ಮಗ್ನರಾಗುವುದು ನಮ್ಮೆಲ್ಲರ ಉದ್ದೇಶವಾಗಿದೆ.

**2. ರೂಪರೇಷೆ (ಆರಾಖಡಾ)** Format of Activity Sheet is given earlier in SSC Board website.

**3. ಕೃತಿ ಪತ್ರಿಕೆಯ ನಮೂನೆ** Specimen of Activity Sheet is given earlier in SSC Board website.

# 4. ಮೌಲ್ಯಮಾಪನ ಪದ್ಧತಿ

ಕನ್ನಡ ಪ್ರಥಮ ಭಾಷೆ ಇಯತ್ತೆ: 10 ನೆಯ

( ಕುಮಾರ ಭಾರತಿ )

**ಯಾವ ಬದಲಾವಣೆಗಳಾಗಿವೆ ?**

- ಪ್ರಶ್ನೆಗಳ ಸರಮಾಲೆ ಇರಬಾರದು.
- ಭಾಷಾ ಕೌಶಲ್ಯಗಳನ್ನು ಪರೀಕ್ಷಿಸಲು ಹೆಚ್ಚು ಅನೌಪಚಾರಿಕ ಕೃತಿಗಳಿರಬೇಕು.
- ವೈವಿಧ್ಯಮಯವಾದ ಬರವಣಿಗೆಗಳಿರಬೇಕು.
- ಬರವಣಿಗೆಯ ಕೌಶಲ್ಯವನ್ನು ಪರೀಕ್ಷಿಸಲು ದಿನನಿತ್ಯ ಬದುಕಿಗೆ ಸಂಬಂಧಿಸಿದ ಕೃತಿಗಳನ್ನು ನೀಡಬೇಕು.
- ಸಾದರಪಡಿಸುವಿಕೆ (Presentation) ಯು ಹೆಚ್ಚು ಆಕರ್ಷಕವಾಗಿದೆ.
- ಕಲಿಕೆ ಮತ್ತು ಪರೀಕ್ಷಿಸುವಿಕೆಯ ಮಧ್ಯದ ಅಂತರವನ್ನು ಕಡಿಮೆಗೊಳಿಸಬೇಕು.
- ಓದುವ ಮತ್ತು ಬರೆಯುವ ಕೌಶಲ್ಯಗಳನ್ನು ಪರೀಕ್ಷಿಸುವ ಕಡೆಗೆ ಹೆಚ್ಚು ಲಕ್ಷ್ಯಕೊಡಬೇಕು.
- ಸ್ವಂತ ಅಭಿಪ್ರಾಯದ ಅಭಿವ್ಯಕ್ತಿಗೆ ಹೆಚ್ಚು ಮಹತ್ವ ಕೊಡಲಾಗಿದೆ.
- ಕಲಿಯುವವರಿಗೆ ವಿಚಾರ ಮಾಡುವ ಸ್ಫೂರ್ತಿ ಮತ್ತು ವ್ಯಕ್ತಪಡಿಸುವ ಹೆಚ್ಚು ಅವಕಾಶಗಳನ್ನು ಒದಗಿಸಲಾಗಿದೆ.
- ಉತ್ತರಗಳನ್ನು ಕಂಠಪಾಠ ಮಾಡುವ ಬದಲಾಗಿ, ರಂಜನೆಯುಕ್ತ ಕೃತಿಗಳನ್ನು ಆನಂದದಿಂದ ಬಿಡಿಸುತ್ತ ನಾಲ್ಕೂ ಭಾಷಾ ಕೌಶಲ್ಯಗಳನ್ನು ಮೈಗೂಡಿಸಿಕೊಳ್ಳುವರು.
- ಪ್ರಶ್ನೆಗಳ ಸಂಖ್ಯೆ ಕಡಿಮೆಯಾಗುವುದರಿಂದ ಮಕ್ಕಳ ಮಾನಸಿಕ ತಯಾರಿಯ ಉತ್ಸಾಹ ಇಮ್ಮಡಿಗೊಳಿಸುವುದು.
- ಪ್ರಶ್ನೆ ಪತ್ರಿಕೆಯ ಸ್ವರೂಪ ಹೆದರಿಸುವ ಬದಲಾಗಿ ಆಕರ್ಷಕ ಮತ್ತು ಗೌರವಾರ್ಹವಾಗಿದೆ.

**ಬದಲಾವಣೆಗಳು ಏಕೆ ಆಗಬೇಕು?**

1. ಪ್ರಶ್ನೆಗಳು ಪರೀಕ್ಷೆಯ ಭಯವನ್ನು ಹುಟ್ಟಿಸುತ್ತವೆ.
2. ಮಿತವಾದ ವ್ಯಾಪ್ತಿ ಅಥವಾ ಉದ್ದೇಶ: ಏನು, ಏಕೆ, ಯಾವಾಗ, ಎಲ್ಲಿ, ಯಾರು ಮತ್ತು ಹೇಗೆ ಎಂಬಲ್ಲಿಗೆ ಸೀಮಿತವಾಗಿದೆ.
3. ವಿಷಯದ ಮತ್ತು ಸ್ಮರಣ ಶಕ್ತಿಯ ಪರೀಕ್ಷೆ.
4. ಮೌಲ್ಯಮಾಪನದಲ್ಲಿ ರಚನಾವಾದದ (constructivism) ಸ್ಥಾನ ಕಡಿಮೆ ಇರುವುದು.
5. ತರಗತಿಯ ಹೊರಗಿನ ಜೀವಂತ ಪ್ರಪಂಚದೊಂದಿಗೆ ಯಾವುದೇ ಸಂಬಂಧವಿಲ್ಲ.
6. ಉತ್ತೀರ್ಣ ಮತ್ತು ಅನುತ್ತೀರ್ಣ ಎಂಬ ಸಂದರ್ಭವು ಮುಜುಗುರವನ್ನು ಸೃಷ್ಟಿಸುತ್ತದೆ.
7. ವಿದ್ಯಾರ್ಥಿಗಳಿಗೆ ಗೊತ್ತಿಲ್ಲದ ವಿಷಯಗಳ ಪರೀಕ್ಷೆಗೆ ಪ್ರೋತ್ಸಾಹಿಸಬೇಕು.

8. ಆಸಕ್ತಿದಾಯಕ ಮತ್ತು ತೊಡಗಿಸಿಕೊಳ್ಳುವಂತಹ ಪರೀಕ್ಷೆಗಳು ಇರಬೇಕು.

9. ಮುಂಚಿತವಾಗಿ ಪ್ರಶ್ನೆಗಳ ಸೀಮಿತತೆಯನ್ನು ನಿರ್ಧರಿಸದಿರುವದಕ್ಕೆ ಸಾಕಷ್ಟು ಅವಕಾಶವಿರಬೇಕು.
(Scope for open-endedness)

10. ಬದುಕಿಗೆ ಸಂಬಂಧಿಸಿದಂತೆ ಪರೀಕ್ಷಿಸಬೇಕು.

11. ಉಚ್ಚಮಟ್ಟದಲ್ಲಿ ವಿಚಾರ ಮಾಡುವ (Higher Order Thinking skils) ಕೌಶಲ್ಯಗಳನ್ನು ಪರೀಕ್ಷಿಸಬೇಕು.

12. ಅನೌಪಚಾರಿಕ ಮತ್ತು ಸಹಜವಾದ ಪರೀಕ್ಷೆ ನಡೆಸಬೇಕು.

13. ಭಯ ನಿರ್ಮಿಸುವಂತಹ ವಾತಾವರಣ ಶೂನ್ಯಕ್ಕೆ ತಲುಪಬೇಕು.

14. ಪರೀಕ್ಷೆ ನಡೆಸುವ ಸಲುವಾಗಿ ಪರೀಕ್ಷೆ ನಡೆಸಬಾರದು.

15. ಕೌಶಲ್ಯಗಳ ಸಮನ್ವಯತೆ ಇರಬೇಕು.

16. ವಿದ್ಯಾರ್ಥಿ ಕೇಂದ್ರಿತವಾಗಿರಬೇಕು.

17. ಮೌಲ್ಯಮಾಪನದಲ್ಲಿ ರಚನಾತ್ಮಕತೆ ಬೇಕು.

18. ಪರಸ್ಪರ – ಪ್ರತಿಕ್ರಿಯಿಸುವಂತಹ ಕೃತಿಗಳು ಇರಬೇಕು.

19. ಸಾಂದರ್ಭಿಕ ಕಲಿಕೆ ಮತ್ತು ಪರೀಕ್ಷೆಗೆ ಸಹಾಯ ಮಾಡುವಂತಹ ಕೃತಿಗಳು ಇರಬೇಕು.

20. ಅನೌಪಚಾರಿಕವಾಗಿ ಪರೀಕ್ಷಿಸಬೇಕು.

21. ಕಲಿಕೆ ಮತ್ತು ಪರೀಕ್ಷೆ ಒತ್ತಡರಹಿತವಾಗಿರಬೇಕು.

**ಕೃತಿಪತ್ರಿಕೆಯ ಮೂಲಕ ಆಗಲಿರುವ ಮೌಲ್ಯಮಾಪನಕ್ಕಾಗಿ ಅವಶ್ಯವಿರುವ ಅಧ್ಯಯನ –ಬೋಧನೆಯ ಸಂದರ್ಭದ ಸೂಚನೆಗಳು:**

1. ಕೃತಿಪತ್ರಿಕೆಯ ಮೂಲಕ ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡುವುದಿದ್ದರೂ ಸಹ ಪ್ರಚಲಿತ ಪಠ್ಯಪುಸ್ತಕದಲ್ಲಿ ಯಾವುದೇ ಬದಲಾವಣೆ ಮಾಡಲಾಗಿಲ್ಲ.
2. ಪಠ್ಯಪುಸ್ತಕದಲ್ಲಿಯ ಪ್ರಶ್ನೆಗಳು(ಸ್ವಾಧ್ಯಾಯ) ಅಧ್ಯಯನಕ್ಕೆ ಅವಶ್ಯಕವಾಗಿವೆ. ಆದರೆ, ಅವುಗಳನ್ನು ಕೃತಿಗಳ ರೂಪದಲ್ಲಿ ಮಂಡಿಸಿ ಪರೀಕ್ಷೆ ತೆಗೆದುಕೊಳ್ಳುವುದು ಸಾಧ್ಯವಿದೆ.
3. ಪಾಠದ ಬೋಧನೆ ಮಾಡುತ್ತಿರುವಾಗ ಅದು ಕೃತಿಗಳ ಮೂಲಕವೇ ನಡೆಯುವಂತೆ ಶಿಕ್ಷಕರು ಲಕ್ಷ್ಯವಹಿಸುವುದು ಅವಶ್ಯವಾಗಿದೆ.
4. ಜ್ಞಾನರಚನಾವಾದದ ವಿವಿಧ ತತ್ವಗಳನ್ನು ಎದುರಿಗಿಟ್ಟುಕೊಂಡು ಅದು ಅಧ್ಯಯನ–ಬೋಧನೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬರುವಂತೆ ನೋಡಿಕೊಳ್ಳುವುದು ಅವಶ್ಯವಾಗಿದೆ.
5. ಕೃತಿ ಪುಸ್ತಕವನ್ನು ಆದಷ್ಟು ಬೇಗ ಉಪಲಬ್ದ ಮಾಡಿಕೊಡಲಾಗುವುದು. ಅದರ ಉಪಯೋಗವನ್ನು ಪಾಠಕ್ಕನುಗುಣವಾಗಿ ವಿವಿಧ ಕೃತಿಗಳಿಂದ ರೂಢಿ ಮಾಡಲು ಉಪಯೋಗಿಸಿಕೊಳ್ಳಬೇಕು.
6. ವಿದ್ಯಾರ್ಥಿಗಳಿಂದ ಯಾವ ಪ್ರತಿಕ್ರಿಯೆಯ ಅಪೇಕ್ಷೆ ಇದೆಯೋ, ಅದರ ಚರ್ಚೆಯನ್ನು ಅವಶ್ಯವಾಗಿ ವಿದ್ಯಾರ್ಥಿಗಳೊಂದಿಗೆ ಮಾಡಬೇಕು.

**ಕೃತಿಪತ್ರಿಕೆಯ ಪ್ರಶ್ನೆಪತ್ರಿಕೆಯನ್ನು ತಯಾರಿಸುವ ಶಿಕ್ಷಕರಿಗಾಗಿ ಸೂಚನೆಗಳು:**

ಕೃತಿಪತ್ರಿಕೆಯನ್ನು ತಯಾರಿಸುವುದು ಉತ್ತರ ಪತ್ರಿಕೆಯನ್ನು ತಯಾರಿಸುವುದಕ್ಕಿಂತ ಹೆಚ್ಚು ಆಹ್ವಾನಾತ್ಮಕವಾಗಿದೆ. ಪಾರಂಪರಿಕ ಪ್ರಶ್ನೆಪತ್ರಿಕೆ ಪದ್ಧತಿಯ ಬದಲಾಗಿ ಕೃತಿಗಳಿಂದ ಆಗುವ ಮೌಲ್ಯಮಾಪನದ ಬದಲಾವಣೆಯನ್ನು ಲಕ್ಷ್ಯದಲ್ಲಿಡುವುದು ಅವಶ್ಯವಾಗಿದೆ. ಮೌಲ್ಯಮಾಪನದಲ್ಲಿ ಪರೀಕ್ಷೆಯು ಬೇಸರ ತರಿಸುವ, ನೀರಸ ಹುಟ್ಟಿಸುವಂತೆ ಇರಕೂಡದು. ಅದು, ಆನಂದ ನೀಡುವ, ಚಿಂತೆಯಿಲ್ಲದ್ದು ಆಗಿರಬೇಕು ಎಂಬುದನ್ನು ನೆನಪಿಡಬೇಕು. ಅದರಂತೆಯೇ ಮೌಲ್ಯಮಾಪನವು ಪ್ರತ್ಯಕ್ಷವಾಗಿ ಜೀವನಕ್ಕೆ ಹೊಂದಿಕೊಳ್ಳುವಂತಿರಬೇಕು. ಅದರಲ್ಲಿ ಜ್ಞಾನ ರಚನಾವಾದದಲ್ಲಿಯ ತತ್ವಗಳನ್ನು ಉಪಯೋಗಿಸಿ ಕೃತಿಪತ್ರಿಕೆಯನ್ನು ತಯಾರಿಸಬೇಕು. ಪ್ರಶ್ನಾರ್ಥಕ ವಾಕ್ಯಗಳ ಸಹಾಯದಿಂದ ಮೌಲ್ಯಮಾಪನದೊಂದಿಗೆ ಕೃತಿಗಳಿಂದ ವಿದ್ಯಾರ್ಥಿಗಳು ಜ್ಞಾನ ಸಂಪಾದನೆ ಮಾಡಿದ ಬಗ್ಗೆ ಪರೀಕ್ಷೆ ಮಾಡುವ ಅಪೇಕ್ಷೆಯೂ ಇದೆ. ವಿದ್ಯಾರ್ಥಿಗಳು ಅವರ ಸ್ಮರಣಶಕ್ತಿಯ ಪರೀಕ್ಷೆಗೆ ಮಹತ್ವ ಕೊಡುವುದಕ್ಕಿಂತ ಸಮಸ್ಯೆಯನ್ನು ಮಾಡುವ ಕೃತಿಗಳನ್ನು ಮಾಡುವುದು ಅಪೇಕ್ಷಿತವಾಗಿದೆ.

## ಪ್ರಶ್ನೆ ಪತ್ರಿಕೆ ರಚಿಸುವ ಶಿಕ್ಷಕರು ಕೃತಿಪತ್ರಿಕೆಯನ್ನು ತಯಾರಿಸುವಾಗ ಮುಂದಿನ ಸೂಚನೆಗಳತ್ತ ಗಮನ ನೀಡಬೇಕು.

### (ಅ) ಕೃತಿಪತ್ರಿಕೆಯನ್ನು ತಯಾರಿಸುವ ಮೊದಲು:

1. ಭಾಷೆಯ ಅಧ್ಯಯನದ ಉದ್ದೇಶಗಳನ್ನು ಸ್ಪಷ್ಟವಾಗಿ ಗಮನದಲ್ಲಿಟ್ಟುಕೊಂಡು ಸಾಕಷ್ಟು ಅಭ್ಯಾಸ ಮಾಡುವುದು ಅವಶ್ಯವಾಗಿದೆ.
2. ಕೌಶಲ್ಯಾಧಾರಿತ ಕೃತಿಗಳನ್ನು ಆಯ್ಕೆ ಮಾಡಲು ಭಿನ್ನ ಭಿನ್ನ ಪ್ರಕಾರಗಳ ಕೃತಿಗಳನ್ನು ಮಾಡುವುದು ಅವಶ್ಯವಾಗಿದೆ. ಇದರಿಂದಾಗಿ ಒಂದೇ ಪ್ರಕಾರದ ಕೃತಿಗಳ ಪುನರಾವೃತ್ತಿ ಕೃತಿಪತ್ರಿಕೆಯಲ್ಲಿ ಆಗಲಾರದು.
3. ಪ್ರತಿಯೊಂದು ಕೃತಿಯಿಂದ ಯಾವ ಕೌಶಲ್ಯದ ಪರೀಕ್ಷೆ ಆಗಲಿದೆ ಎಂಬುದನ್ನು ನಿಶ್ಚಿತಪಡಿಸುವುದು ಅವಶ್ಯವಾಗಿದೆ.
4. ಗ್ರಹಿಸುವ (comprehension)(ಆಕಲನ) ಕೌಶಲ್ಯದ ಕಲೆಯನ್ನು ಅಳೆಯುವ ಘಟಕಗಳನ್ನು ಆಯ್ದುಕೊಳ್ಳುವಾಗ ಜಾಗ್ರತೆ ವಹಿಸಿರಿ. ಈ ಘಟಕಗಳು ರೂಪರೇಷೆ(ಆರಾಖಡಾ)ಯಲ್ಲಿ ನಮೂದಿಸಿದ ಶಬ್ದ ಮಿತಿಯನ್ನು ಮೀರಕೂಡದು. ಅರ್ಥಪೂರ್ಣವಾದ ಘಟಕದ ಆಯ್ಕೆ ಮಾಡಬೇಕು. ಪಠ್ಯಪುಸ್ತಕದಲ್ಲಿಯ ಘಟಕಗಳಲ್ಲಿ ಅನಾವಶ್ಯಕವಾದ ಬದಲಾವಣೆ ಮಾಡಬಾರದು. ಘಟಕಗಳು ಹೆಚ್ಚು ದೊಡ್ಡವೂ ಇಲ್ಲವೇ ಅತೀ ಚಿಕ್ಕವೂ ಆಗಿರಬಾರದು. ಘಟಕದಲ್ಲಿಯ ಸಂದರ್ಭ ಪೂರ್ಣವಾಗಿರಬೇಕು. ಒಂದೇ ಪಾಠದಲ್ಲಿಯ ಎರಡು ಘಟಕಗಳು ಇರಕೂಡದು. ವಿವಿಧ ಪ್ರಕಾರದ ಕೃತಿಗಳನ್ನು ಮಾಡಬಹುದಾದ ಘಟಕಗಳನ್ನೇ ತೆಗೆದುಕೊಳ್ಳಬೇಕು.
5. ಕೃತಿಗಾಗಿ ಅವಶ್ಯವಾದ ವಿವಿಧ ಆಕಾರಗಳು ಸಕಾರಣ ಮತ್ತು ಸದುದ್ದೇಶಗಳನ್ನು ಹೊಂದಿರಬೇಕು. ಅವಶ್ಯಕತೆ ಇರದ ವಿವಿಧ ಭೂಮಿತಿಯ ಆಕಾರಗಳನ್ನು ಉಪಯೋಗಿಸಬೇಡಿರಿ.
6. ಕೃತಿ ಮಾಡಲು ಅವಶ್ಯವಾದ ಸೂಚನೆಗಳು ಸ್ಪಷ್ಟವಾಗಿರಬೇಕು. ಅವುಗಳಿಂದ ಯಾವುದೇ ಪ್ರಕಾರದ ಗೊಂದಲ ನಿರ್ಮಾಣವಾಗಬಾರದು. ಉತ್ತರಿಸುವ ಅಪೇಕ್ಷೆಗಳನ್ನು ಸರಿಯಾಗಿ ವ್ಯಕ್ತಪಡಿಸಿರಿ.
7. ಸಂಪೂರ್ಣ ಕೃತಿ ಪತ್ರಿಕೆಯಲ್ಲಿ ಒಂದು ಪ್ರಕಾರದ ಕೃತಿ ಒಂದೇ ಸಲ ಬರಬೇಕು, ಪುನರಾವೃತ್ತಿ ಆಗದಿರಲಿ.
8. ಉಪಪ್ರಶ್ನೆಗಳ ಗುಣಗಳು ಹಾಗೂ ಅಪೇಕ್ಷಿತ ಉತ್ತರಗಳ ಸಂಖ್ಯೆಯಲ್ಲಿ ಹೊಂದಾಣಿಕೆ ಇರಲಿ. ಒಂದು ಉಪಪ್ರಶ್ನೆಗೆ ಅರ್ಧ(1/2)ಕ್ಕಿಂತ ಕಡಿಮೆ ಗುಣ ಕೊಡುವುದು ಸಾಧ್ಯವಿಲ್ಲ ಎಂಬುದರ ಅರಿವು ಇರಲಿ.
9. ಕೃತಿಗಳ ಮಂಡನೆ ಆಕರ್ಷಕವಾಗಿರಲಿ, ಆದರೆ ಅದು ತರ್ಕಬದ್ಧವಾಗಿಯೂ ಇರಲಿ.

10. ಬರವಣಿಗೆ ಕೌಶಲ್ಯಗಳ ಮೇಲೆ ಕೃತಿಗಳನ್ನು ತಯಾರಿಸುವಾಗ ವಿದ್ಯಾರ್ಥಿಗಳಿಗೆ ಬರೆಯಲು ಅಂಶಗಳು ಸಿಗುವಂತೆ ಇರಬೇಕು.

11. ಬರವಣಿಗೆ ಕೌಶಲ್ಯಗಳಲ್ಲಿ ಆರಿಸಿಕೊಂಡ ವಿಷಯದಲ್ಲಿ ಯಾವುದೇ ಸಮಾಜ, ಧರ್ಮ, ಜಾತಿ, ಭಾಷೆ, ಲಿಂಗ ಮುಂತಾದ ಭೇದಗಳ ಮೇಲೆ ಪೂರ್ವಗ್ರಹಪೀಡಿತವಾಗಿರಬಾರದು. ಸಮಾಜದಲ್ಲಿ ವೈರತ್ವ ಉಂಟುಮಾಡುವ ಆಕ್ಷೇಪಾರ್ಹವಾದ ವಿಷಯಗಳು ಇರಬಾರದು.

12. ಕೃತಿಗಳನ್ನು ತಯಾರಿಸುವಾಗ ಅವುಗಳ ಸಂಪೂರ್ಣ ಸಂದರ್ಭವನ್ನು ಹೊಂದಿರುವ ಪರಿಚ್ಛೇದದ ಮೇಲೆ ಆಧರಿಸಿರಬೇಕು. ಪಾಠದಲ್ಲಿಯ ಇತರ ಭಾಗವನ್ನು ಆಧರಿಸಿದ ಸಂದರ್ಭಗಳು ಕೃತಿಗಳಲ್ಲಿ ಇರಬಾರದು.

## (ಬ) ಕೃತಿಪತ್ರಿಕೆ ತಯಾರಿಸುವುದರೊಂದಿಗೆ:

1. ಕೃತಿ ಪತ್ರಿಕೆಯನ್ನು ತಯಾರಿಸುತ್ತಿರುವಾಗಲೇ ಅಪೇಕ್ಷಿತ ಉತ್ತರ ಪತ್ರಿಕೆಗಳನ್ನು ತಯಾರಿಸಬೇಕು.

2. ಯಾವ ಅಂಶಕ್ಕೆ ಎಷ್ಟು ಗುಣಗಳು ಅಪೇಕ್ಷಿತವಾಗಿವೆ ಎಂಬುದನ್ನು ಸ್ಪಷ್ಟಪಡಿಸಬೇಕು.

## ಕೃತಿಗಳ ಸ್ವರೂಪ

- ಜೇಡರ ಬಲೆಯಾಕಾರದ ಆಕೃತಿ (Web), ತೂಗುಪಟ (Flow chart), ಪರಿಕಲ್ಪನೆಯ ನಕಾಶೆ (Concept Map), ವೃಕ್ಷ ರೇಖಾಕೃತಿ (Tree diagram)
- ಮಾಹಿತಿ ಬದಲಾಯಿಸುವುದು, ಪರಿಚ್ಛೇದವನ್ನು ಆಕೃತಿಗೆ ಮತ್ತು ಆಕೃತಿಯನ್ನು ಪರಿಚ್ಛೇದಕ್ಕೆ ಪರಿವರ್ತಿಸುವುದು.
- ಒಂದು ಶಬ್ದಕ್ಕೆ ಸಮಾನ ಅರ್ಥ ನೀಡುವ ಬೇರೆ ಪದ ಬರೆಯುವುದು.
- ಕನಿಷ್ಟ ನಾಲ್ಕು ಅಕ್ಷರಗಳಿರುವ ಪ್ರತಿಯೊಂದು ಅಕ್ಷರದಿಂದ ಆರಂಭವಾಗುವ ಹೊಸ ಶಬ್ದ ಬರೆಯುವುದು. ಒಂದೇ ಶಬ್ದಕ್ಕೆ ಬೇರೆ ಬೇರೆ ಅರ್ಥಕೊಡುವ ಪದಗಳನ್ನು ಕೊಡಲು ತಿಳಿಸುವುದು.
- ಅನೇಕ ಪರ್ಯಾಯಗಳಿಂದ ಯೋಗ್ಯ ಪರ್ಯಾಯ ಬರೆಯುವುದು.
- ಬಿಟ್ಟ ಸ್ಥಳ ತುಂಬುವುದು, ವಾಕ್ಯ ಪೂರ್ಣಗೊಳಿಸುವುದು.
- ಕೋಷ್ಟಕ/ ಪರಿಚ್ಛೇದ ತಯಾರಿಕೆ
- ವಾಕ್ಯಗಳನ್ನು ಕ್ರಮವಾಗಿ ಬರೆಯುವುದು.
- ಭಿತ್ತಿಪತ್ರ ತಯಾರಿಕೆ
- ವರದಿ ಲೇಖನ
- ಸಂಭಾಷಣೆ ಲೇಖನ
- ಕಥೆ ಬೆಳವಣಿಗೆ
- ☆ ಸರಿ /ತಪ್ಪು
- ☆ ಸ್ವ ಅಭಿಪ್ರಾಯ
- ☆ ಪದಬಂಧ, ಒಗಟು,
- ☆ ಗುಂಪಿಗೆ ಸೇರದ ಪದವನ್ನು ಬರೆಯುವುದು
- ☆ ಸಾರಾಂಶ ಲೇಖನ
- ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ ಮೂರನೆಯ ಪದ ಬರೆದು, ಅದಕ್ಕೆ ಸಂಬಂಧಿಸಿದ ಪದ ಬರೆಯುವುದು.

# ಆಲಿಸುವಿಕೆಯ ಕೌಶಲ್ಯಗಳು Listening Skills

1. ಶಿಕ್ಷಕರು ವಿವಿಧ ರೀತಿಯ ಕವಿತೆಗಳನ್ನು ವರ್ಗದಲ್ಲಿ ಹಾಡಿ, ರಾಗಬದ್ಧವಾಗಿ ಹೇಳಿ ಪ್ರಾಸಬದ್ಧ ಕವಿತೆಗಳ ಸೌಂದರ್ಯವನ್ನು ಸವಿಯಬೇಕು ಮತ್ತು ಮೆಚ್ಚಿಕೊಳ್ಳಬೇಕು.
2. ಭಿನ್ನ ಸಂದರ್ಭಗಳಲ್ಲಿಯ ಹೊಸ ಶಬ್ದಗಳನ್ನು ಮತ್ತು ಪಡೆನುಡಿಗಳ ಅರ್ಥಗಳನ್ನು ಊಹಿಸಬೇಕು.
3. Global understanding-ಒಟ್ಟಿನ, ಸಮಷ್ಟಿಯ, ಇಡೀ ಸಮಗ್ರವಾದ ತಿಳುವಳಿಕೆ ನೀಡುವ ಯೋಗ್ಯವಾಗಿ ಉದ್ದವಾಗಿರುವ ವಿವಿಧ ಗದ್ಯಖಂಡಗಳನ್ನು ಓದಬೇಕು ಮತ್ತು ರೆಕಾರ್ಡ್ ಮಾಡಿ ಆಲಿಸಬೇಕು.
4. Narration- ಕಥನ, ಕಥೆ ನಿರೂಪಿಸುವುದು; ಕಥೆ ವರ್ಣನಾತ್ಮಕ ಮುಂತಾದ ಗದ್ಯಪಾಠಗಳನ್ನು ಮೆಚ್ಚಿಕೊಂಡು ಗಟ್ಟಿಯಾಗಿ ಓದಬೇಕು. ಮಕ್ಕಳು ತಂತಾನೆ ಅದರ ಮೇಲೆ ತಯಾರಿಸಿದ ಪ್ರಶ್ನೆಗಳಿಗೆ ಉತ್ತರಿಸುತ್ತಾರೆ.
5. ಮುಖ್ಯಾಂಶ ಮತ್ತು ಸಾರಾಂಶವನ್ನು ಬರೆಯುವ ಉದ್ದೇಶದಿಂದ ಭಾಷಣ ಮತ್ತು ಗದ್ಯಖಂಡಗಳನ್ನು ಆಲಿಸುವುದು.
6. ಯೋಗ್ಯ ಉದ್ದವಿರುವ ಧ್ವನಿ ಸುರುಳಿ (ರೆಕಾರ್ಡೆಡ್) ಯ ಕಥೆಗಳು, ಕಥಾನಿರೂಪಣೆ, ವರ್ಣನೆ, ಮಾಹಿತಿಯ ತುಣುಕು ಅಥವಾ ಓದಿದ ಭಾಗವನ್ನು ತಿಳಿದುಕೊಂಡು, ಸಂಬಂಧಿತ ಪ್ರಶ್ನೆಗಳನ್ನು ಕೇಳಬೇಕು.
7. ಓದಿದ ಗದ್ಯಖಂಡಕ್ಕೆ ಸಂಬಂಧಿಸಿದ / ಸಂಬಂಧವಲ್ಲದ ಅಂಶಗಳು; ವಾಸ್ತವಗಳು ಮತ್ತು ಅಭಿಪ್ರಾಯಗಳನ್ನು ಗುರುತಿಸುವುದು.
8. ಭಾಷಣಕಾರನ ದೃಷ್ಟಿಕೋನ/ಉದ್ದೇಶ/ ಮನೋಭಾವದಿಂದ ಆರಿಸಿಕೊಂಡ ಶಬ್ದಗಳು ಮತ್ತು ನೀಡಿದ ಸಂದೇಶವನ್ನು ಗ್ರಹಿಸುವ ತೀರ್ಮಾನಕ್ಕೆ ಬರುವುದು.
9. ನೀಡಿದ ಸುಳಿವು (Clues) ಗಳ ಆಧಾರದಿಂದ ಭಾಷಣ, ಕಥೆ, ಸಂಭಾಷಣೆ ಮುಂತಾದ ಸಂದರ್ಭಗಳಲ್ಲಿ ಮುಂದೇನಾಗುವುದು ಎಂದು ಹೇಳಬೇಕು.
10. ಸಾಹಿತ್ಯದ ವಿವಿಧ ಪ್ರಕಾರಗಳಿಂದ ಹೊಮ್ಮುವ ಭಾಷೆ ಮತ್ತು ಅನುಭವಗಳನ್ನು ಆನಂದಿಸುವ ಮತ್ತು ಕೊಂಡಾಡುವ ಅರಿವನ್ನು ಮೂಡಿಸುವುದು.
11. Genre (n) –ಕಾವ್ಯದ, ಕಲೆಯ – ಪ್ರಕಾರ, ಬಗೆ, ಶೈಲಿ; ಪಾಠ ಅಥವಾ ಪದ್ಯವನ್ನು ಕೇಳಿದ ನಂತರ ಅದರ ಸಾಹಿತ್ಯದ ಪ್ರಕಾರವನ್ನು ಗುರುತಿಸಿ ಬರೆದುಕೊಳ್ಳಬೇಕು.
12. ಬೋಧನೆ, ಸಂಭಾಷಣೆ ಮತ್ತು ಸಂದರ್ಶನ (Interview) ಗಳನ್ನು ಗ್ರಹಿಸುವ ದೃಷ್ಟಿಯಿಂದ ಕೇಳಬೇಕು.
13. ವಾರ್ತೆ, ಕಾಮೆಂಟ್ರಿ, ಭಾಷಣಗಳು ಮತ್ತು ರೇಡಿಯೋ/ ಟಿ.ವ್ಹಿ/ ಟೇಪರೇಕಾರ್ಡರ/ಸಿ.ಡಿ.ಗಳು (T.V/Tapes/ CDs) ಮತ್ತು ಸಮೂಹಮಾಧ್ಯಮಗಳ ಕಾರ್ಯಕ್ರಮಗಳನ್ನು ಗ್ರಹಣ ಮಾಡಿಕೊಳ್ಳುವಂತೆ ಕೇಳಿಸಿಕೊಳ್ಳಬೇಕು.
14. ಧ್ವನಿಯ ಏರಿಳಿತ; ಸೂಕ್ಷ್ಮ ವಿಚಾರಗಳನ್ನು ಅರ್ಥಮಾಡಿಕೊಳ್ಳಬೇಕು.

15. ವಾದ ಮಂಡಿಸುವ, ಚರ್ಚಿಸುವ, ಬರೆಯುವ, ಓದುವ, ಪಾತ್ರಾಭಿನಯ (Role play), ಸಮಸ್ಯೆ ಬಗೆಹರಿಸುವ ಮತ್ತು ನಿರ್ಧರಿಸುವ ಕೃತಿಗಳಿಗಾಗಿ ಆಲಿಸುವಿಕೆಯನ್ನು ಬಳಸಿಕೊಳ್ಳಬೇಕು.
16. ಶಬ್ದಗಳೆರಡರ ಮಧ್ಯೆ ಅಡಗಿರುವ ಅರ್ಥವನ್ನು ಗ್ರಹಿಸುವುದು.

## ಮಾತನಾಡುವ ಕಲೆಗಳು Speaking Skills

1. ಕವಿತೆಗಳ ಲಯ, ಸ್ವರ ಹಾಗೂ ಶಬ್ದೋಚ್ಚಾರಗಳಲ್ಲಿ ಸ್ವರಾಘಾತ (ಸರಿಯಾದ ಸ್ವರಕ್ಕೆ ಒತ್ತು ಕೊಟ್ಟು ಹೇಳುವುದು) ಕಲಿಯಬೇಕು.
2. ಮಾತನಾಡುವಾಗ ಒಮ್ಮತದಿಂದ ಸ್ವೀಕರಿಸಲ್ಪಡುವ ಉಚ್ಚಾರ ಹಾಗೂ ಸರಿಯಾದ ಒತ್ತು ನೀಡಿ ಸ್ವರಾಘಾತಗಳನ್ನು ಕಲಿಯಬೇಕು.
3. ವಿವಿಧ ಶಬ್ದ ಹಾಗೂ ಪದಸಮುಚ್ಚಯಗಳ ಉಪಯೋಗವನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಮಾಡಲು ಕಲಿಯಬೇಕು.
4. ವರ್ಗದಲ್ಲಿ ಓದಿದ ಸುಮಾರಾಗಿ ದೊಡ್ಡದಿರುವ ಗದ್ಯಭಾಗದ ಸಾರಾಂಶ ಹೇಳಲು ಬರಬೇಕು.
5. ವಿದ್ಯಾರ್ಥಿಯು ವರ್ಗದಲ್ಲಿ ಸ್ವತಃ ಇತರರು ಓದಿದ ವಿಶಿಷ್ಟ ಮಾಹಿತಿ ನೀಡುವ ಗದ್ಯಭಾಗದ ಮೇಲೆ ಆಧಾರಿತ ಪ್ರಶ್ನೆಗಳಿಗೆ ಮೌಖಿಕ ಉತ್ತರ ಕೊಡಬೇಕು.
6. ಕಲ್ಪನೆ ಹಾಗೂ ಭಾವನೆಗಳನ್ನು ಸರಿಯಾಗಿ, ಸ್ಪಷ್ಟವಾಗಿ ಹಾಗೂ ಸುಸಂಬಂಧವಾಗಿ ವ್ಯಕ್ತಪಡಿಸಬೇಕು.
7. ಕಥೆ, ನಿರೂಪಣೆ, ವಿವರಣೆ, ಉಚಿತವಾದ, ಸಮಾಚಾರದ ಭಾಗಗಳ ಮೇಲೆ ಪ್ರಸಂಗಕ್ಕೆ ತಕ್ಕಂತಹ ಪ್ರಶ್ನೆಗಳನ್ನು ಕೇಳಲು ತಿಳಿದುಕೊಳ್ಳಬೇಕು.
8. ಸಂಬಂಧಪಟ್ಟ ಹಾಗೂ ಸಂಬಂಧಪಡದ ವಿಷಯಗಳ ಭೇದ ತಿಳಿಯಬೇಕು.
9. ರೇಡಿಯೋ, ಟಿ.ವ್ಹಿ, ಧ್ವನಿಸುರುಳಿ, ಸಿ.ಡಿ. ಮುಂತಾದವುಗಳಲ್ಲಿ ಇರುವ (ಸಮಾಚಾರ, ಭಾಷಣ, ವೀಕ್ಷಕ ವಿವರಣೆ) ಮುಂತಾದವುಗಳ ಚಿಕ್ಕ, ಮೌಖಿಕ ವಿವರಣೆ ನೀಡುವುದನ್ನು ತಿಳಿದುಕೊಳ್ಳಬೇಕು.
10. ಭಾಷಣಕಾರರ ಅಥವಾ ಲೇಖಕರ ಭಾವನೆ, ಮನೋವೃತ್ತಿ ಹಾಗೂ ಉದ್ದೇಶಗಳ ಮೇಲೆ ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯವನ್ನು ಮೌಖಿಕವಾಗಿ ಸಾದರಪಡಿಸಬೇಕು.
11. ಚರ್ಚೆ, ವಾದ-ವಿವಾದ, ಸಂದರ್ಶನ, ಸಂಭಾಷಣೆ ಮುಂತಾದವುಗಳಲ್ಲಿ ಭಾಗವಹಿಸಬೇಕು.
12. ಕಥೆ, ಚುಟುಕು, ಪ್ರಸಂಗ, ಸ್ವಾನುಭವ ಘಟನೆಗಳ ವಿವರಣೆ ಮುಂತಾದವುಗಳನ್ನು ಕೇಳಬೇಕು.
13. ಲೇಖಕರ ಕಲ್ಪನೆ ಹಾಗೂ ದೃಷ್ಟಿಕೋನಗಳ ಮೇಲೆ ಟೀಕೆ ಮಾಡಲು ಕಲಿಯಬೇಕು.
14. ಆಶುಭಾಷಣ (ಮೊದಲೇ ತಯಾರಿಸಲಾರದ) – ಪರಿಚಿತ ವಿಷಯದ ಮೇಲೆ ನಿರ್ಧಾರಿತ ಶಬ್ದಗಳಲ್ಲಿ ಮಾತನಾಡಬೇಕು.
15. ಔಪಚಾರಿಕತೆಯಿಂದ ಅನೌಪಚಾರಿಕತೆಯನ್ನು ಮುಕ್ತಪಡಿಸುವ ಸಾಕಷ್ಟು ಸಂಭಾಷಣೆಗಳ ಪದ್ಧತಿಗಳನ್ನು ಕಲಿಯಬೇಕು.

16. ವ್ಯಕ್ತಿತ್ವ ವಿಕಾಸ, ಪಾತ್ರದ ಬೆಳವಣಿಗೆ, ಸಾಮಾಜಿಕ ಜೀವನದಲ್ಲಿ ಭಾಗವಹಿಸಲು ಭಾಷೆಯ ಬಳಕೆಯನ್ನು ಮಾಡಲು ಕಲಿಯಬೇಕು.

## ಓದುವ ಕೌಶಲ್ಯಗಳು Reading Skills

1. ಕವಿತೆಯನ್ನು ಗಟ್ಟಿಯಾಗಿ ಓದಿ ಆನಂದಪಟ್ಟು ಅದರ ಲಯಬದ್ಧತೆಯನ್ನು ಹಾಗೂ ಇತರ ವಿಷಯಗಳನ್ನು ಆಸ್ವಾದಿಸುವುದು.
2. ಯಾವ ತರಹದ ಬರಹ ಇದೆ ಎಂಬುದನ್ನು ತಿಳಿದುಕೊಂಡು ಉಚಿತವಾದ ವೇಗದಿಂದ ಮನಸ್ಸಿನಲ್ಲಿ ಓದುವುದು.
3. ಆನಂದಿತರಾಗಲು ಆತ್ಮಕಥೆ, ಪ್ರವಾಸಕಥನ, ನಾಟಕ, ಸಣ್ಣ ಕಥೆಗಳ, ಭಾಗಗಳನ್ನು ಓದುವುದು.
4. ವರ್ತಮಾನಪತ್ರ, ಜಾಹೀರಾತು, ಪ್ರಕಟಣೆ (ನೋಟೀಸು) ಕರಪತ್ರಗಳನ್ನು ತಿಳುವಳಿಕೆ ಬೆಳೆಸಲು ಓದಿಸಬೇಕು.
5. ಸಂಪೂರ್ಣ ಮಾಹಿತಿ, ಸುಸಂಬದ್ಧತೆ, ಸೂಚಿತ ಅರ್ಥ ಹಾಗೂ ವಿಚಾರಗಳ ಬೆಳವಣಿಗೆಯನ್ನು ತಿಳಿದುಕೊಳ್ಳಲು ಸಾಲು/ಪುಟಗಳನ್ನು ಬಿಟ್ಟು ಮುಂದೆ ಓದುವುದು, ಗಮನಕೊಟ್ಟು ಪರಿಶೀಲಿಸುವುದು, ಹಾಗೂ ಅರ್ಥ ತಿಳಿದುಕೊಂಡು ಓದುವುದು ಮುಂತಾದ ತಂತ್ರಗಳನ್ನು ಉಪಯೋಗಿಸಿಕೊಳ್ಳುವುದು.
6. ಅಭ್ಯಾಸದ ಒಳ್ಳೆಯ ಹವ್ಯಾಸ ಬೆಳೆಸಲು ಹೆಚ್ಚು ಹೆಚ್ಚು ಓದಬೇಕು.
7. ಆನಂದ ಹಾಗೂ ಮಾಹಿತಿ ಪಡೆಯಲು ವಿವರವಾಗಿ ಓದುವುದು ಹಾಗೂ ಪ್ರಸಿದ್ಧ ಲೇಖಕರ ಮತ್ತು ಕವಿಗಳ ಸಾಹಿತ್ಯದ ಪರಿಚಯ ಮಾಡಿಕೊಳ್ಳಬೇಕು.
8. ಭಾಷೆಯ ಸೊಗಸು, ಅಲಂಕಾರ ಹಾಗೂ ಸಾಹಿತ್ಯದ ಇತರ ತಂತ್ರಗಳನ್ನು ಗುರುತಿಸಿ ತಿಳಿದುಕೊಳ್ಳಬೇಕು.
9. ಸಂಭಾಷಣೆಗಳನ್ನು ಮುಂದುವರೆಸುವ ಸಾಂಕೇತಿಕ ಶಬ್ದಗಳಾದ– ಆದರೂ, ಹೇಗಾದರೂ, ಹೆಚ್ಚಾಗಿ, ಅದರ ಬದಲಾಗಿ ಮುಂದೆ ಏನಾಗಬಹುದು ಎಂಬುದನ್ನು ಸೂಚಿಸುವ ಶಬ್ದಗಳ ಉಪಯೋಗಮಾಡಬೇಕು.
10. ಓದುವಾಗ ಘಟನೆಗಳ, ಪರಿಣಾಮಗಳ ಅಪೇಕ್ಷೆ ಮಾಡಿ ಮುಂದೆ ಆಗುವುದರ ವಿಚಾರ ಮಾಡಬೇಕು.
11. ಕೊಟ್ಟ ಪಾಠದಲ್ಲಿಯ ತರ್ಕಬದ್ಧ ಸಂಬಂಧಗಳನ್ನು ತಿಳಿದುಕೊಳ್ಳಬೇಕು.
12. ಸಂಬಂಧಪಟ್ಟ ಅಸಂಬದ್ಧವಾದ ಮಾಹಿತಿ, ನಿಜಾಂಶ, ಅಭಿಪ್ರಾಯ ಮುಂತಾದವುಗಳನ್ನು ತಿಳಿದುಕೊಳ್ಳುವುದು.
13. ಮಾಹಿತಿಯನ್ನು ಶಾಬ್ದಿಕ ರೂಪದಿಂದ ಆಕೃತಿಯಲ್ಲಿ ಹಾಗೂ ಆಕೃತಿಗಳನ್ನು ಶಬ್ದಗಳಲ್ಲಿ ಬದಲಿಸುವುದು.
14. ನಿಘಂಟು **(Dictionary), (Encyclopedia)** ಮುಂತಾದವುಗಳ ಉಪಯೋಗ ಮಾಡಿ ಪರಾಮರ್ಶೆ ಮಾಡುವ ಕೌಶಲ್ಯಗಳನ್ನು ಬೆಳೆಸಲು, ವಿಸ್ತೃತವಾದ ಹಾಗೂ ಅಧಿಕ ತಿಳುವಳಿಕೆ ಮೂಡಲು ಸಹಾಯ ಮಾಡುವುದು.
15. ಸಾಹಿತ್ಯದ ಶೈಲಿಯನ್ನು ತಿಳಿಯಬೇಕು ಹಾಗೂ ಆಸ್ವಾದಿಸಬೇಕು.
16. ಸೂಕ್ಷ್ಮ ಸಂವೇದನೆಯನ್ನುಬೆಳೆಸಲು ಭಾಷೆ ಹಾಗೂ ಅದರ ಸಾಹಿತ್ಯವನ್ನು ಆಸ್ವಾದಿಸಿ ಆನಂದಪಡಬೇಕು.

# ಬರವಣಿಗೆಯ ಕೌಶಲ್ಯಗಳು Writing skills

**ವಿದ್ಯಾರ್ಥಿಗಳಿಗೆ ಕೆಳಗಿನ ಸಂಗತಿಗಳು ತಿಳಿಯಲು ....**

1. ಬರೆಯುವ ವೇಗ ಉಚಿತವಾಗಿಟ್ಟು ಸರಿಯಾಗಿ, ನೀಟಾಗಿ, ಸ್ಪಷ್ಟವಾಗಿ ಓದಲು ಬರುವಂತೆ ಬರೆಯಬೇಕು.
2. ಬರವಣಿಗೆಯ ತಯಾರಿ, ರಚನೆ, ಹೊಸ ತಯಾರಿಕೆ ಹಾಗೂ ಪುನರಧ್ಯಯನ ಮುಂತಾದ ಬರವಣಿಗೆಯ ತಂತ್ರಗಳ ಪ್ರಭುತ್ವ ಪಡೆಯಬೇಕು.
3. ಪಠ್ಯಪುಸ್ತಕದಲ್ಲಿಯ ಹಾಗೂ ಅಪಠಿತ ಗದ್ಯ ಹಾಗೂ ಪದ್ಯಗಳಲ್ಲಿಯ ಅಲಂಕಾರ, ಭಾಷೆಯ ಸೊಗಸು, ಸಾಹಿತ್ಯದ ತಂತ್ರ ಮುಂತಾದವುಗಳ ಮೇಲೆ ಬರುವ ಪ್ರಶ್ನೆಗಳಿಗೆ ಉತ್ತರ ಬರೆಯಬೇಕು.
4. ಸೂಚನೆ, ಭಿತ್ತಿಪತ್ರ, ಕರಪತ್ರ, ಸುದ್ದಿ ಹಾಗೂ ಜಾಹೀರಾತು ಮುಂತಾದವುಗಳ ಮೂಲಕ ಮಾಹಿತಿ ತಿಳಿಸಲು (ಬರೆಯಲು) ಕಲಿಸುವುದು.
5. ಔಪಚಾರಿಕ ಮತ್ತು ಅನೌಪಚಾರಿಕ ಪತ್ರಗಳನ್ನು ಬರೆಯುವುದು.
6. ಘಟನೆ, ವಸ್ತುಗಳ ಹಾಗೂ ಪದ್ಧತಿಗಳ ವರ್ಣನೆ / ನಿರೂಪಣೆಯನ್ನು ಸುಸಂಬದ್ಧವಾಗಿ ಬರೆಯಬೇಕು.
7. ಪ್ರಾರಂಭದ ಕೆಲವು ಅಂಶಗಳಿಂದ ಕೊಟ್ಟ ಕಥೆಗಳನ್ನು ಪೂರ್ಣಗೊಳಿಸಬೇಕು.
8. ಬಹಿರಂಗ ಪಡಿಸುವ /ಚರ್ಚೆ ಮಾಡುವಂತಹ ವಿಷಯಗಳ ಮೇಲೆ 200 ರಿಂದ 250 ಶಬ್ದಗಳಲ್ಲಿ ನಿಬಂಧ ಬರೆಯಬೇಕು.
9. ಪ್ರಿನ್ಸಿಪಾಲರ ಆಫೀಸಿನಲ್ಲಿ, ರೈಲು ನಿಲ್ದಾಣ, ಬಸ್ ನಿಲ್ದಾಣಗಳಲ್ಲಿಯ ವಿಚಾರಣೆಯ ಕೊಠಡಿ (Enquiry counter) ಮುಂತಾದ ಸ್ಥಳಗಳಲ್ಲಿ ಆದ ಸಂದರ್ಭಕ್ಕೆ ತಕ್ಕ ಸಂಭಾಷಣೆಯನ್ನು ತಯಾರಿಸಬೇಕು.
10. ಸಂಭಾಷಣೆ, ಸಂದರ್ಶನ, ರೇಡಿಯೋ ಮಾತು ಇವುಗಳ ಮೇಲೆ ವರದಿ ಬರೆಯಬೇಕು.
11. ಪಠ್ಯಪುಸ್ತಕದಲ್ಲಿಯ ಪಾಠದ ಸಾರಾಂಶ ಹೇಳುವಾಗ ಟಿಪ್ಪಣಿ ಬರೆಯಬೇಕು. (make notes)
12. ಸಂಕ್ಷಿಪ್ತ ವರದಿ, ಸೂಚನಾಪತ್ರ, ಅರ್ಹತಾ ವಿವರ (curriculam vitae) ಮುಂತಾದವುಗಳನ್ನು ಬರೆಯಬೇಕು.
13. ಶಾಬ್ದಿಕ ಘಟಕಗಳ ಆಕೃತಿಯಲ್ಲಿ ಹಾಗೂ ಆಕೃತಿಗಳನ್ನು ಶಬ್ದರೂಪದಲ್ಲಿ ಬರೆಯಬೇಕು.
14. ಶಾಲೆಯ ನಿಯತಕಾಲಿಕೆ, ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆಯಬೇಕು.

## 5. ಕೃತಿಪತ್ರಿಕೆಯ ನಮೂನೆಗಳು

**ಪ್ರ.1. ಕೆಳಗಿನ ಗದ್ಯಖಂಡವನ್ನು ಓದಿ ಕೊಟ್ಟ ಸೂಚನೆಗಳಿಗೆ ಅನುಸಾರವಾಗಿ ಕೃತಿ ಮಾಡಿರಿ.**

**ಕೆಳಗಿನ ಆಕೃತಿ ಜಾಲವನ್ನು ಪೂರ್ಣಮಾಡಿರಿ.** (2)




**(ಪುಟ 25 – ಪೂರ್ಣ)**

**2. ಮುಂದಿನ ಹೇಳಿಕೆಗಳನ್ನು ಪೂರ್ಣಗೊಳಿಸಿರಿ. ಒಂದು ಉದಾಹರಣೆಯನ್ನು ತೋರಿಸಲಾಗಿದೆ.** (2)

ಅಹಿಲ್ಯಾಬಾಯಿ ಹೋಳ್ಕರ ಇವರು . . . . .

| | |
|---|---|
| ಚಂಡಿ ಚಾಮುಂಡಿಯಂತೆ | |
| ಅಕ್ಕ ಮಹಾದೇವಿಯಂತೆ | |
| ಲಕ್ಷ್ಮಿಬಾಯಿಯಂತೆ | |
| ಕಲ್ಪನಾ ಚಾವ್ಲಾರಂತೆ | |
| ಜೀಜಾಬಾಯಿಯಂತೆ | ವೀರಯೋಧರನ್ನು ರೂಪಿಸಿದರು. |

**3. ಬಿಟ್ಟಸ್ಥಳ ತುಂಬಿರಿ.** (2)

i. ಅಹಿಲ್ಯಾಬಾಯಿ ............ ರಂದು ಜನಿಸಿದರು.

ii. ಅಹಿಲ್ಯಾಬಾಯಿ ................... ದಲ್ಲಿ ಹುಟ್ಟಿದ್ದರು.

iii. ಅಹಿಲ್ಯಾಬಾಯಿಯವರ ತಂದೆ ................. .

iv. ಅಹಿಲ್ಯಾಬಾಯಿಯವರು ................. ಕಂಗೊಳಿಸಿದರು.

**ಪ್ರ. 2. ಕೆಳಗಿನ ಗದ್ಯಖಂಡವನ್ನು ಓದಿ ಕೊಟ್ಟ ಸೂಚನೆಗಳಿಗೆ ಅನುಸಾರವಾಗಿ ಕೃತಿ ಮಾಡಿರಿ.** (2)

**1. ಕೆಳಗಿನವುಗಳಲ್ಲಿ ಸರಿ ಹಾಗೂ ತಪ್ಪು ವಿಧಾನಗಳನ್ನು ಗುರುತಿಸಿ ಬರೆಯಿರಿ.** (2)

i. ಒಂದು ದಿನ ನಸುಕಿನಲ್ಲಿ ರಾಧಾ ಮನೆಯಲ್ಲಿ ಕಸಗುಡಿಸುವಾಗ ಚೀಲವೊಂದನ್ನು ಕಂಡಳು.

ii. ಪರರ ಹಣವನ್ನು ಹೇಳದೇ ಕೇಳದೇ ಮುಟ್ಟಲೂಬಾರದು.

iii. ಇದನ್ನೆಲ್ಲ ಸುಖಾರಾಮ ಮತ್ತು ಅವನ ಹೆಂಡತಿ ಸೂಕ್ಷ್ಮವಾಗಿ ಗಮನಿಸುತ್ತಿದ್ದರು.

iv. ಆ ಶಿಕ್ಷಣ ಸಂಸ್ಥೆಯಲ್ಲಿ ಕಲಿತ ಮಗು ಡಾ. ವಿಶ್ವೇಶ್ವರಯ್ಯನವರಂತಹ ಶ್ರೇಷ್ಠ ವಿಜ್ಞಾನಿ ಆದರೆ ನಮ್ಮ ನಾಡೇ ಸುಜಲಾಂ ಸುಫಲಾಂ ಆಗಬಹುದು.

**(ಒಂದು ದಿವಸ .................... ರಾಧಾ ಅಚ್ಚರಿಗೊಂಡು ತನ್ನ ಸಮ್ಮತಿಯನ್ನು ನೀಡಿದಳು. ಪುಟ- 4)**

2. **ಕೆಳಗಿನ ಶಬ್ದಗಳಿಗೆ ಸರಿಯಾದ ಅರ್ಥವನ್ನು ಕೊಟ್ಟಿರುವ ಪರ್ಯಾಯದಿಂದ ಆರಿಸಿ ಬರೆಯಿರಿ.** (2)

i. ನಸುಕಿನಲ್ಲಿ.................

1.ಮಧ್ಯಾಹ್ನದಲ್ಲಿ 2. ಸಾಯಂಕಾಲದಲ್ಲಿ 3. ಬೆಳಗಿನಲ್ಲಿ

ii. ಪ್ರವಾಸಿ.................

1. ಯಾತ್ರಿಕ 2. ಪ್ರವೇಶ 3. ವನವಾಸಿ

iii. ದಂಪತಿ..........

1. ಮುಂದಾಳು 2. ಪತಿ-ಪತ್ನಿ 3. ಉಚಾಪತಿ

iv. ಸುಫಲಾಂ ............

1. ಒಳ್ಳೆಯ ಬೆಳೆ ಬರುವ 2. ಒಳ್ಳೆಯ ಹಣ್ಣು ಬೆಳೆಯುವ 3. ಒಳ್ಳೆಯ ಗೊಬ್ಬರ

3. **ಕೆಳಗಿನ ಅಕ್ಷರಗಳನ್ನು ಸರಿಯಾಗಿ ಹೊಂದಿಸಿ ಅರ್ಥಪೂರ್ಣವಾದ ಶಬ್ದಗಳನ್ನು ತಯಾರಿಸಿರಿ.** (2)

i. ಸಿರ್ಧದರುನಿರಿ → ................. .

ii. ಚಿಂಯಾಯಿತುತೆ → ................. .

**ಪ್ರ. 3. ಕೆಳಗಿನ ಗದ್ಯಭಾಗವನ್ನು ಓದಿ ಕೊಟ್ಟ ಸೂಚನೆಗಳಿಗೆ ಅನುಸಾರವಾಗಿ ಕೃತಿ ಮಾಡಿರಿ.**

1. **ವಿವೇಕಾನಂದರು ಹೇಳಿದಂತೆ ನಮ್ಮ ದೇಶ ಮಾಡಿದ ಎರಡು ಹಿತನುಡಿಗಳು:-** (2)

i. [ ]

ii. [ ]

**(ಭಾರತದ ಎಲ್ಲ ಧರ್ಮಗಳ ಪರವಾಗಿ ................. ಅವರ ವಾಣಿ ಸದಾ ನಮಗೆ ಸ್ಫೂರ್ತಿ ಕೊಡುತ್ತಿದೆ. ಪುಟ-64 )**

2. **ಕೆಳಗಿನ ಅಂಶಗಳನ್ನು ಪಾಠದಲ್ಲಿ ಬಂದಂತೆ ಅನುಕ್ರಮವಾಗಿ ಬರೆಯಿರಿ.** (2)

i. '' ಏಳಿ ! ಎಚ್ಚರಗೊಳ್ಳಿ ! ಗುರಿಮುಟ್ಟುವವರೆಗೆ ನಿಲ್ಲದಿರಿ. ''

ii. ಸ್ವಾಮಿ ವಿವೇಕಾನಂದರು ವಿಶ್ವಧರ್ಮ ಸಮ್ಮೇಳನದ ಹೃದಯವನ್ನು ಗೆದ್ದಿದ್ದರು.

iii. ವಿವೇಕಾನಂದರು ತಮ್ಮ ಪ್ರಭಾವಶಾಲಿ ವಾಣಿಯಿಂದ ಅಜ್ಞಾನದಲ್ಲಿ ಮೈ ಮರೆತಿದ್ದ ಜನರನ್ನು ಎಚ್ಚರಿಸಿದರು.

iv. ಲಂಡನ್ನಿನ ಮಾರ್ಗರೆಟ್ ನೋಬೆಲ್ ಬಡವರ, ದೀನ ದಲಿತರ ಸೇವೆ ಮಾಡುತ್ತ ಸಹೋದರಿ ನಿವೇದಿತಾ ಎಂಬ ಹೆಸರಿನಿಂದ ಪ್ರಖ್ಯಾತಳಾದಳು.

3. **ಕೆಳಗಿನ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಉಪಯೋಗಿಸಿರಿ.** (2)

ಅ. ಒಡಲಲ್ಲಿ ಬ. ಕೃತಜ್ಞತೆ ಕ. ಉದ್ದಾರ ಡ. ವಿಶ್ವಶಾಂತಿ

**ಪ್ರ. 4. ಕೆಳಗಿನ ಗದ್ಯಭಾಗವನ್ನು ಓದಿ ಕೊಟ್ಟ ಸೂಚನೆಗಳಿಗೆ ಅನುಸಾರವಾಗಿ ಕೃತಿ ಮಾಡಿರಿ.**

1. ಅ. ಈ ಸಂಭಾಷಣೆ ಯಾರು ಯಾರಲ್ಲಿನಡೆಯುತ್ತಿದೆ? ಅವರಿಬ್ಬರಲ್ಲಿ ಯಾವ ಸಂಬಂಧವಿದೆ ? (1)

   ಬ. ಸಂಗಪ್ಪ ರವಿಗೆ ರೊಟ್ಟಿಯ ಕಥೆ ಹೇಳುವ ಕಾರಣವೇನು ? (1)

**(ಸಂಗಪ್ಪ : ರವಿ ನಿನಗೆ ಹಸಿವೆ ಆಗಿಲ್ಲವೆ? ................ ರೊಟ್ಟಿಯ ಕಥೆಯನ್ನೇ ಹೇಳುತ್ತೇನೆ, ಕೇಳು. ಪುಟ– 83)**

2. (2)




**3. ಕೃಷಿಗೆ ಸಂಬಂಧಿಸಿದ ನಾಲ್ಕು ಚಟುವಟಿಕೆಗಳನ್ನು ಹೇಳಿರಿ. (2)**




**ಪ್ರ.5. ಕೆಳಗಿನ ಪದ್ಯವನ್ನು ಓದಿ ಕೊಟ್ಟ ಸೂಚನೆಗಳಿಗೆ ಅನುಸಾರವಾಗಿ ಕೃತಿ ಮಾಡಿರಿ.**

**1. ಕೆಳಗಿನ ಪದಗಳನ್ನು ಸೂಚನೆಯಂತೆ ವಿಂಗಡಿಸಿ ಬರೆಯಿರಿ. (2)**

ಬೆಳೆ, ಬೀಸಣಿಕೆ,ಆಡು,ನಾಲಿಗೆ, ತೊಟ್ಟಿಲು, ತೊಳೆ, ಮುತ್ತು

| ಶರೀರದ ಅವಯವ | ವಸ್ತುಗಳು | ಕ್ರಿಯೆ |
|---|---|---|
| | | |

**(ಅಮ್ಮನ ಹರಕೆ ಪುಟ –23)**

**2. ಯೋಗ್ಯವಾದ ಪರ್ಯಾಯವನ್ನು ಆಯ್ದು ಕೆಳಗಿನ ವಿಧಾನಗಳನ್ನು ಪೂರ್ಣಮಾಡಿರಿ.** (2)

i. ಮಗು ತೊಟ್ಟಿಲಲ್ಲಿ ಈ ರೀತಿಯಾಗಿ ಮಲಗಿರುವನು. ..................... .

ಅ. ಕೈ ಮೇಲೆ ಮಾಡಿ ಬ. ನಾಲಿಗೆ ಹೊರತೆಗೆದು

ಕ. ಹಾಲು ಕುಡಿಯುತ್ತ ಡ. ಹೊಟ್ಟೆ ಮೇಲಾಗಿ

ii. ಮಗುವಿನ ನಾಲಿಗೆಯ ಮೇಲೆ ಇದು ಇದೆ ಎಂದು ತಾಯಿ ಹೇಳಿರುವಳು.

ಅ. ಮೊಸರಿರುವದೆಂದು ಬ. ಸರಸೋತಿ ಇರುವಳೆಂದು

ಕ. ಬೀಸಣಿಕೆ ಇರುವದೆಂದು ಡ. ಹಾಲು ಇರುವದೆಂದು

**3. ಕೆಳಗಿನ ಪದಗಳ ಅರ್ಥಗಳೊಂದಿಗೆ ಹೊಂದಿಸಿ ಬರೆಯಿರಿ.** (2)

| ಶಬ್ದ | ಅರ್ಥ |
|---|---|
| 1. ಹರಕೆ | ಅ. ಕೂಸು |
| 2. ಚಕ್ರವರ್ತಿ | ಆ. ಆಶೀರ್ವಾದ |
| 3. ಕಂಡೆ | ಇ. ರಾಜ |
| 4. ಮಗು | ಈ. ನೋಡಿದೆ |

**ಪ್ರ. 6. ಕೆಳಗಿನ ಗದ್ಯಭಾಗವನ್ನು ಓದಿ ಕೊಟ್ಟ ಸೂಚನೆಗಳಿಗೆ ಅನುಸಾರವಾಗಿ ಕೃತಿ ಮಾಡಿರಿ.**

**1. ಕೆಳಗಿನ ವಾಕ್ಯಗಳನ್ನು ಗದ್ಯಖಂಡದ ವಿಷಯಕ್ಕನುಸರಿಸಿ ಅನುಕ್ರಮವಾಗಿ ಬರೆಯಿರಿ.** (2)

I. ವಿದ್ಯಾರ್ಥಿಗಳು ನೋಡಿದ ಪ್ರೇಕ್ಷಣೀಯ (ಐತಿಹಾಸಿಕ) ಸ್ಥಳಗಳನ್ನು ಅನುಕ್ರಮವಾಗಿ ಬರೆಯಿರಿ.

i) ರಾಜಾ ದಿನಕರ ಕೇಳಕರ ವಸ್ತು ಸಂಗ್ರಹಾಲಯ ii) ಸಾರಸಬಾಗ ಹಾಗೂ ಸಿದ್ಧಿವಿನಾಯಕ ಮಂದಿರ.

iii) ಶನಿವಾರವಾಡಾ iv) ವಿಶ್ರಾಮಬಾಗವಾಡಾ

(ಪ್ರೀತಿಯ ತಮ್ಮ ಸಂಗಮೇಶನಿಗೆ ............... ಹೊರಟೆವು. ಪುಟ-39, 40)

**II. 'ಅ' ವಿಭಾಗದಲ್ಲಿಯ ಸ್ಥಳದೊಂದಿಗೆ 'ಬ' ವಿಭಾಗದ ಸ್ಥಳಗಳ ಮಹತ್ವದೊಂದಿಗೆ ಸರಿಯಾಗಿ ಹೊಂದಿಸಿ ಬರೆಯಿರಿ.** (2)

| ಅ ವಿಭಾಗ | ಬ ವಿಭಾಗ |
|---|---|
| i) ಶನಿವಾರವಾಡಾ | 1) ಸುಂದರವಾದ ತೋಟ |
| ii) ವಿಶ್ರಾಮಬಾಗವಾಡಾ | 2) ರಮಣೀಯ ಬೆಟ್ಟ |
| iii) ಪರ್ವತಿ | 3) ಐತಿಹಾಸಿಕ ವಾಸ್ತು |
| iv) ಸಾರಸಬಾಗ | 4) ಶ್ರೀಮಂತ ಸಂಸ್ಕೃತಿ ಮತ್ತು ಪರಂಪರೆಗಳ ಪ್ರತೀಕ |

**II. ಒಂದೇ ವಾಕ್ಯದಲ್ಲಿ ಉತ್ತರಿಸಿರಿ.** (2)

i) ಪ್ರಸ್ತುತ ಪತ್ರ ಯಾರು ಯಾರಿಗೆ ಬರೆದಿರುವರು.?

ii) ಯಾವ ತರಗತಿಯ ಮಕ್ಕಳು ಪುಣೆಯ ದರ್ಶನಕ್ಕೆ ಹೊರಟಿರುವರು.?

iii) ಪ್ರವಾಸಕ್ಕೆ ಯಾವ ದಿನಾಂಕದಂದು ಹೊರಟರು.?

**ಪ್ರ. 7. ಕೆಳಗಿನ ಗದ್ಯಖಂಡವನ್ನು ಓದಿ ಕೊಟ್ಟ ಸೂಚನೆಗಳಿಗೆ ಅನುಸಾರವಾಗಿ ಕೃತಿ ಮಾಡಿರಿ.**

**1. ಕೆಳಗಿನ ಅಕ್ಷರಗಳ ಸಮೂಹದಿಂದ ಸರಿಯಾದ ಶಬ್ದ ತಯಾರಿಸಿರಿ.** (1)

i) ವಿಭುರಿವಶ್ವನೇದೇ = ☐ ii) ತ್ತವಿನಾಶ್ವಥದ = ☐

**( ಕಲ್ಕತ್ತ (ಈಗ ಕೊಲ್ಕತ್ತಾ) ಭಾರತದ ದೊಡ್ಡ ನಗರ ........... ಭಿಕ್ಷುಕನಿಗೆ ಕೊಟ್ಟು ಬಿಟ್ಟರು.– ಪುಟ 62 ರಿಂದ 63 )**

**2. ಯೋಗ್ಯ ಪರ್ಯಾಯವನ್ನು ಆಯ್ದು ತೆರವಿದ್ದ ಸ್ಥಳಗಳನ್ನು ತುಂಬಿ ಬರೆಯಿರಿ.** (2)

i) ನರೇಂದ್ರನು ತುಂಬಾ ಜಾಣನಿದ್ದಂತೆ ............ ಹೃದಯದವನೂ, ಪ್ರಾಮಾಣಿಕನೂ ಆಗಿದ್ದನು.

(ಜಾಣ, ಕಳವಳ, ಕೋಮಲ, ತೇಜಸ್ಸು)

ii)................ ವಿವೇಕಾನಂದರ ತಂದೆಯವರಾಗಿದ್ದರು. ( ನರೇಂದ್ರ, ಪರಮಹಂಸ, ವಿಶ್ವನಾಥದತ್ತ, ರಾಮಕೃಷ್ಣ)

**3. ಒಂದು ಶಬ್ದದ ಬೇರೆ ಬೇರೆ ಅರ್ಥವನ್ನು ಬರೆಯಿರಿ.** (2)

ಉದಾ : ಗೌರವ = ಬೆಲೆ, ಮಹತ್ವ

i) ಉಪಾಧ್ಯಾಯ = ii) ಅದ್ಭುತ= iii) ಮುದ್ದಿನ= iv) ಕೋಮಲ=

**4. ಕೆಳಗಿನ ಶಬ್ದಗಳನ್ನು ಸ್ವಂತ ವಾಕ್ಯದಲ್ಲಿ ಉಪಯೋಗಿಸಿರಿ.** (2)

i) ಕಳವಳ = ____________________

ii) ದೈವಾಧೀನ = ____________________

**ಪ್ರ. 8. ಕೆಳಗಿನ ಗದ್ಯಖಂಡವನ್ನು ಓದಿ ಕೊಟ್ಟ ಸೂಚನೆಗಳಿಗೆ ಅನುಸಾರವಾಗಿ ಕೃತಿ ಮಾಡಿರಿ.**

**1.ಕೆಳಗಿನ ಪ್ರಶ್ನೆಗಳಿಗೆ ಒಂದೆರೆಡು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** (2)

i) ರವಿಯ ಅಜ್ಜನ ಹೆಸರೇನು? ii) ರವಿಯು ತಟ್ಟೆಯಲ್ಲಿ ಏನನ್ನು ಉಳಿಸಿದನು?

iii) ಸಂಗಪ್ಪನ ಊರು ಯಾವುದು? iv) ಯಾವ ಸಮಯದಲ್ಲಿ ಸಂಗಪ್ಪನು ಮರದ ಕಡೆಗೆ ಬಂದನು?

**(ಮಾವಿನ ಹಳ್ಳ ಎಂಬ ಒಂದು ಊರು ................ ಕೈ ತೊಳೆದುಕೊಂಡನು. ಪುಟ–82, 83)**

**2. ಕೆಳಗಿನ ವಾಕ್ಯಗಳಿಂದ ಉಚಿತವಾದ ಪ್ರಶ್ನೆ ಗಳನ್ನು ರಚಿಸಿರಿ.** (2)

i) ಅಜ್ಜ–ಮೊಮ್ಮಗ ವಿನೋದದ ಮಾತಗಳನ್ನಾಡುತ್ತ ಊಟ ಮಾಡಿದರು.

☐

ii) ರವಿಯು ಒಂದು ಮರದ ನೆರಳಿನಲ್ಲಿ ಕಥೆಯ ಪುಸ್ತಕವನ್ನು ಓದುತ್ತ ಕುಳಿತನು.

☐

3. ಕೆಳಗಿನ ಶಬ್ದಗಳ ಗುಂಪುಗಳಿಗೆ ಒಂದೇ ಶಬ್ದವನ್ನು ಕಂಸದಿಂದ ಆರಿಸಿ ಬರೆಯಿರಿ. (2)

ಉದಾ: ಬೆಳಿಗ್ಗೆಯಿಂದ ಸಂಜೆಯವರೆಗೆ = ದಿನವಿಡೀ

i) ಬೆಳೆಕೊಯ್ದು ರಾಶಿಮಾಡುವ ಸಮಯ=

ii) ತಂದೆಯ ಅಥವಾ ತಾಯಿಯ ತಂದೆ =

ಪ್ರ.9. ಕೆಳಗಿನ ಪದ್ಯಭಾಗವನ್ನು ಓದಿ ಕೊಟ್ಟ ಸೂಚನೆಗಳಿಗೆ ಅನುಸಾರವಾಗಿ ಕೃತಿ ಮಾಡಿರಿ.

1. ಯೋಗ್ಯ ಪರ್ಯಾಯವನ್ನು ಆಯ್ದು ಬಿಟ್ಟಸ್ಥಳ ತುಂಬಿರಿ. (2)

i) ಬದುಕಿನಲ್ಲಿ ಬರುವ ಸೋಲನ್ನು ಓಡಿಸಬೇಕಾದರೆ.................

ಅ. ಸಾಲ ಮಾಡಬೇಕು ಬ. ತಪ್ಪದೆ ಕೆಲಸ ಮಾಡಬೇಕು ಕ. ವಾದ ಮಾಡಬೇಕು

ii) ರಸ್ತೆಯಲ್ಲಿ1000 ರೂಪಾಯಿ ಸಿಕ್ಕರೆ.................

ಅ. ಕಳೆದುಕೊಂಡವರಿಗೆ ಕೊಡಬೇಕು ಬ. ಮನೆಗೆ ಒಯ್ಯಬೇಕು ಕ. ವಸ್ತು ಖರೀದಿಸಬೇಕು

( ಕೇಳಿರಿ ಮಕ್ಕಳೆ ................ಇದರಲಿ ಎನುತಿರೆ. ಪುಟ- 37)

ಜಿ. ಹೊಂದಿಸಿ ಬರೆಯಿರಿ. (1)

| ಅ | ಬ |
|---|---|
| i. ಬಯಸು | ಅ. ಸಂತೋಷ ಪಡು |
| ii. ಕಜ್ಜ | ಬ. ಇಷ್ಟಪಡು |
| | ಕ. ಕಾರ್ಯ |

3. ನಾಳೆಯ ದಿನಗಳನ್ನು ಸುಂದರಗೊಳಿಸಲು ಹೇಳಿರುವ ಸೂತ್ರಗಳು. (2)




ಪ್ರ. 10. ಕೆಳಗಿನ ಗದ್ಯಖಂಡವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟ ಕೃತಿಗಳನ್ನು ಮಾಡಿರಿ.

1. ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ. (2)

i) ಕೃಷ್ಣನ ಹೆಂಡತಿಯ ಹೆಸರು. ii) ಸಾರಜಾಳ ಪತಿಯ ಹೆಸರು.

(ಒಂದು ಊರಿನಲ್ಲಿ ಸುಖಾರಾಮ ............ ಎಂದಳು ಸಾರಜಾ. ಪುಟ-3)

2. **ವಿರುದ್ಧಾರ್ಥ ಪದ ಬರೆಯಿರಿ.** (2)

i) ಪತ್ನಿ ______ ii) ಜಿಪುಣ ______ iii) ಕೆಟ್ಟದ್ದು ______

3. **ಕೃಷ್ಣನ ಕುಟುಂಬ ಆನಂದದಿಂದ ಇರಲು ಕಾರಣಗಳು.** (2)




**ಪ್ರ. 11. ಕೆಳಗಿನ ಗದ್ಯಖಂಡವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟ ಕೃತಿಗಳನ್ನು ಮಾಡಿರಿ.**

1. **ಹೊಂದಿಸಿ ಬರೆಯಿರಿ.** (2)

| ಅ | ಬ |
|---|---|
| i. ರಾಣಿ ಲಕ್ಷ್ಮಿಬಾಯಿ | ಅ. ಪಾಂಡಿತ್ಯ |
| ii. ರಾಣಿ ಚನ್ನಮ್ಮ | ಬ. ಸಾಹಸ |
| iii. ಅಕ್ಕ ಮಹಾದೇವಿ | ಕ. ವೀರತನ |
| iv. ಕಲ್ಪನಾ ಚಾವ್ಲಾ | ಡ. ಧೈರ್ಯ |

**(ಪ್ರಾಚೀನ ಕಾಲದಿಂದಲೂ …………… ಅಂಗವಾಗಿ ಪರಿಣಮಿಸಿತು. ಪುಟ-25)**

2. **ಅಹಿಲ್ಯಾಬಾಯಿಯವರ ಕುತೂಹಲ ಮತ್ತು ಹವ್ಯಾಸಗಳು** (2)




**ಪ್ರ. 12. ಕೆಳಗಿನ ಪದ್ಯಭಾಗವನ್ನು ಓದಿ ಕೊಟ್ಟ ಸೂಚನೆಗಳಿಗೆ ಅನುಸಾರವಾಗಿ ಕೃತಿ ಮಾಡಿರಿ.**

**1. ಬಿಟ್ಟಸ್ಥಳಗಳನ್ನು ಪಾಠದಿಂದ ಯೋಗ್ಯ ಪರ್ಯಾಯವನ್ನು ಆಯ್ದು ತುಂಬಿರಿ.** (2)

i) ನನ್ನದು ವೇಳೆಗೆ ಸರಿಯಾಗಿ ಕೆಲಸ ಮಾಡುವ…………..

ii) ಬಹುಜನ ಸುಖಾಯ, ಬಹುಜನ…………………

iii) ಪ್ರವಾಸದಲ್ಲಿರುವವರು ಮರಳಿ ಮನೆಗೆ ಬರುತ್ತಾರೆಂ ………… ಇಂದು ಇಲ್ಲದಾಗಿದೆ.

iv) ನನ್ನ ಪ್ರವಾಸ ಅತ್ಯಂತ ಸುಖಕರ ಹಾಗೂ…………..

**(ಮುದ್ದು ಮಕ್ಕಳೇ …………………. ಎಂಬುದು ನನ್ನ ಗುರಿಯಾಗಿದೆ. ಪುಟ-44)**

**2. ಕೋಷ್ಟಕದಲ್ಲಿರುವ ಅಕ್ಷರಗಳ ಸಹಾಯದಿಂದ ಕೆಳಗಿನ ಅರ್ಥಬರುವ ಶಬ್ದಗಳನ್ನು ಹುಡುಕಿ ಬರೆಯಿರಿ.** (2)

( ಗುರುತು, ದೇವರು, ಸವಲತ್ತು, ಹೊರಗೆ ಹೋಗುವ ದಾರಿ )

| | | | | | | | |
|---|---|---|---|---|---|---|---|
| ಸ | ಕ | ನಿ | ಡ | ಮ | ರ್ಗ | ಪೂ | ರಾ |
| ಡ | ಮೊ | ಪ | ಲ | ರು | ಠ | ಲೂ | ನಾ |
| ದ | ತ | ಹ | ಸ | ಮ | ಯ | ಜ | ಪಾ |
| ಜ | ರಿ | ಳ | ತಿ | ರ್ಥ | ವ | ಚೇ | ನ |
| ಯಾ | ಅ | ಯಿ | ತು | ಸಾ | ಗೀ | ನ | ಣ |

**ಪ್ರ. 13. ಕೆಳಗಿನ ಗದ್ಯಖಂಡವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟ ಕೃತಿಗಳನ್ನು ಮಾಡಿರಿ.**

**1. 'ಪದವೀಧರನಾದನು' ಈ ಶಬ್ದದಲ್ಲಿ ಬರುವ ಅಕ್ಷರಗಳನ್ನು ಬಳಸಿ ಬೇಕಾದ ನಾಲ್ಕು ಶಬ್ದಗಳನ್ನು ಬರೆಯಿರಿ.** (2)




**(ಸಕಲೇಶಪುರ ಎಂಬ ಹಳ್ಳಿ ಇತ್ತು...... ............ ಓದಿ ಪದವೀಧರನಾದನು. ಪುಟ-56)**

**2. ಒಂದು ವಾಕ್ಯದಲ್ಲಿ ಉತ್ತರಿಸಿರಿ.** (2)

i) ಶಿಕ್ಷಣ ಇಲಾಖೆಯವರು ಯಾರ ಶೋಧ ಮಾಡುತ್ತಿದ್ದರು?

ii) ಸುಂದರನು ಶಾಲೆ ಬಿಟ್ಟ ಬಳಿಕ ಏನು ಮಾಡುತ್ತಿದ್ದನು?

**3. ಸುಂದರನು ಮುಂಜಾನೆ ಹಾಗೂ ಸಾಯಂಕಾಲ ಮಾಡುವ ಕೆಲಸಗಳು.** (2)

ಮುಂಜಾನೆ

ತಡರಾತ್ರಿಯವರೆಗೆ

**ವ್ಯಾಕರಣ**

**ಪ್ರ. 14. ಕೆಳಗಿನ ಕೃತಿಗಳನ್ನು ಸೂಚನೆಯಂತೆ ಬಿಡಿಸಿರಿ.**

**ಅ. ಕೆಳಗಿನ ವಾಕ್ಯದಲ್ಲಿಯ ಗೆರೆಹೊಡೆದ ಶಬ್ದಗಳ ಲಿಂಗ, ವಚನಗಳನ್ನು ಬರೆಯಿರಿ. (ಬೇಕಾದ 1)** (1)

i. ಮಕ್ಕಳಿಗೆ ತಾಯಿಯೇ ಮೊದಲ ಗುರು.

ಲಿಂಗ = ______ ವಚನ = ______

ii. ಪುಣೆಯಲ್ಲಿ ಪರ್ವತಿ ಎಂಬ ಹೆಸರಿನ ಅತ್ಯಂತ ರಮಣೀಯ ಬೆಟ್ಟವಿದೆ.

ಲಿಂಗ = ______ ವಚನ = ______

**ಬ. ಕೆಳಗಿನ ವಾಕ್ಯದಲ್ಲಿಯ ಕರ್ತೃ, ಕರ್ಮ, ಕ್ರಿಯಾಪದಗಳನ್ನು ಗುರುತಿಸಿ ಗೆರೆಹೊಡೆದ ಒಂದು ಪದದ ಸಂಬಂಧ ಬರೆಯಿರಿ. (ಬೇಕಾದ 1)** (1)

i. ಅಮರನು ಊಟ ತಯಾರಿಸಲು ಬಾಣಸಿಗರನ್ನು ನೇಮಿಸಿಕೊಂಡನು. (2)

ಕರ್ತೃ = ______ ಕರ್ಮ= ______ ಕ್ರಿಯಾಪದ= ______

ii. ಸುಖಾರಾಮ ತನ್ನ ಪತ್ನಿಯೊಡನೆ ಮಾತನಾಡುತ್ತ ಕುಳಿತಿದ್ದನು.

ಕರ್ತೃ = ______ ಕರ್ಮ= ______ ಕ್ರಿಯಾಪದ= ______

**ಕ. ಯೋಗ್ಯ ಪರ್ಯಾಯವನ್ನು ಆಯ್ದು ಕೆಳಗಿನ ವಾಕ್ಯಗಳ ಕಾಲವನ್ನು ಬರೆಯಿರಿ. (ಬೇಕಾದ 1)** (1)

(ಭವಿಷ್ಯತ್ ಕಾಲ, ವರ್ತಮಾನ ಕಾಲ, ಭೂತಕಾಲ )

i. ರವಿ ಗಿಡದ ನೆರಳಿನಲ್ಲಿ ಪುಸ್ತಕ ಓದುತ್ತ ಕುಳಿತನು.

ii. ರೋಹಿತನು ಮುಂದಿನ ಪಂದ್ಯದಲ್ಲಿ ಚೆನ್ನಾಗಿ ಆಡಬಹುದು.

**ಡ. ಕೆಳಗಿನ ಶಬ್ದಗಳ ವಚನ ಬದಲಿಸಿ ಬರೆಯಿರಿ.** (1)

i. ಜಿಪುಣ = ______ 2. ಪುಸ್ತಕಗಳು = ______

**ಗ. ಕೆಳಗಿನ ವಾಕ್ಯದಲ್ಲಿಯ ನಾಮಪದ, ಸರ್ವನಾಮ ಹಾಗೂ ಕ್ರಿಯಾಪದಗಳನ್ನು ಆಯ್ದು ಬರೆಯಿರಿ. (ಬೇಕಾದ ಎರಡು)** (1)

ಮಹಾದೇವನು ಕಾಯಿಲೆಯಿಂದ ಹಾಸಿಗೆ ಹಿಡಿದನು. ಅವನಿಗೆ ಅಮರ ಅಜೇಯರೆಂಬ ಇಬ್ಬರು ಮಕ್ಕಳಿದ್ದರು.

ನಾಮಪದಗಳು 1. ______ 2. ______

ಸರ್ವನಾಮಗಳು 1. ______ 2. ______

ಕ್ರಿಯಾಪದಗಳು 1. ______ 2. ______

## **ಬರವಣಿಗೆಯ ಕೌಶಲ್ಯಗಳು:**

**ಪ್ರ. 15.** **ಜೀವನಾವಶ್ಯಕ ವಸ್ತುಗಳ ಮಹತ್ವ** **(4)**

**ಈ ವಿಷಯದ ಬಗ್ಗೆ ಕೆಳಗಿನ ಅಂಶಗಳ ಸಮಾವೇಶದೊಂದಿಗೆ ಸ್ವಂತದ ವಿಚಾರಗಳನ್ನು ಸೇರಿಸಿ ನಿಬಂಧ ಬರೆಯಿರಿ.**

1. ನೀರನ್ನು ಮಿತವ್ಯಯದಿಂದ ಉಪಯೋಗಿಸಬೇಕು.
2. ಆಹಾರ ಪದಾರ್ಥಗಳನ್ನು ಅವಶ್ಯಕತೆಗನುಸಾರ ಸೇವಿಸಬೇಕು.
3. ವಿದ್ಯುತ್ತನ್ನು ಯೋಗ್ಯರೀತಿಯಾಗಿ ಬಳಸಬೇಕು.
4. ಹಣದ ಸದ್ಬಳಕೆಯನ್ನು ಮಾಡಿಕೊಳ್ಳಬೇಕು.

**ಅಥವಾ**

**ನಾನು ಶಿಕ್ಷಣ ಮಂತ್ರಿಯಾದರೆ**

ಈ ವಿಷಯದ ಬಗ್ಗೆ ಕೆಳಗಿನ ಅಂಶಗಳ ಸಮಾವೇಶದೊಂದಿಗೆ ಸ್ವಂತದ ವಿಚಾರಗಳನ್ನು ಸೇರಿಸಿ ನಿಬಂಧ ಬರೆಯಿರಿ.

1. ಜನರಲ್ಲಿ ಶಿಕ್ಷಣದ ಬಗ್ಗೆ ಕುತೂಹಲ ಮೂಡಿಸುವದು.
2. ಸಾಕ್ಷರತೆಯನ್ನು ಹೆಚ್ಚಿಸುವದು.
3. ನೌಕರಿಗಾಗಿ ಶಿಕ್ಷಣವಲ್ಲದೆ ಉಪಜೀವನಕ್ಕಾಗಿ ಶಿಕ್ಷಣ ಕಲ್ಪನೆ ಮೂಡಿಸುವದು.
4. ಸ್ತ್ರೀ-ಪುರುಷ, ಶ್ರೀಮಂತ ಬಡವ, ಉಚ್ಚ-ನೀಚ ಎಂಬ ಭೇದವನ್ನು ಅಳಿಸಿ ಹಾಕುವದು.

**ಪ್ರ. 16.** **ಕಥೆ ಬರೆಯುವುದು**

**ಕೆಳಗೆ ನೀಡಿದ ಅಂಶಗಳನ್ನು ಆಧಾರವಾಗಿಟ್ಟು ಕಥೆಯನ್ನು ಪೂರ್ತಿಗೊಳಿಸಿ ಶೀರ್ಷಿಕೆಯನ್ನು ಕೊಡಿರಿ.** **(4)**

ಒಂದು ನಾಯಿ ........... ಬಾಯಲ್ಲಿ ರೊಟ್ಟಿಯ ತುಂಡು ................ ನದಿ ದಾಟುವದು. ...... ನೀರಿನಲ್ಲಿ ಪ್ರತಿಬಿಂಬ ಕಂಡಿತು. ......... ಪ್ರತಿಬಿಂಬದ ನಾಯಿಯ ರೊಟ್ಟಿಯ ಮೇಲೆ ಬಯಕೆ .......... ಬಾಯಿ ತೆರೆದು ಬೊಗಳುವದು. ............ ರೊಟ್ಟಿ ಹರಿದು ಹೋಯಿತು.......... .

**ಅಥವಾ**

ಆಮೆ ಮೊಲ ಗೆಳೆಯರು ............. ಓಟದ ಸ್ಪರ್ಧೆ ................ ಮೊಲ ಮುಂದೆ ........... ಗಿಡದ ನೆರಳಲ್ಲಿ ನಿದ್ರೆ ................ ಆಮೆ ಮುಂದೆ ............... ಗುರಿ ಮುಟ್ಟಿತು ............... ಮೊಲದ ಸೋಲು

**ಪ್ರ. 17. ಪತ್ರ ಲೇಖನ**

ಪ್ರವಾಸಕ್ಕೆ ಹೋಗಬೇಕೆಂಬ ಬಯಕೆ. ಹಣದ ಅವಶ್ಯಕತೆ ಪ್ರವಾಸದಲ್ಲಿ ನೋಡುವ ಸ್ಥಳ, ದಿನಾಂಕ, ಜೊತೆ ಬರುವವರ ವಿವರಣೆ, ಹೋಗಲು ಮಾಡಿದ ವ್ಯವಸ್ಥೆ, ಊಟ, ವಾಸ್ತವ್ಯದ ನಿಯೋಜನೆ, ಮರಳಿ ಬರುವ ದಿನದ ಬಗ್ಗೆ ತಿಳಿಸುವುದು.

ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನಿಮ್ಮ ಸ್ವಂತದ ವಿಚಾರಗಳನ್ನು ಸೇರಿಸಿ ರವಿಯು ತಂದೆಯವರಿಗೆ ಒಂದು ಪತ್ರ ಬರೆಯುವನು. **4** **ಅಥವಾ**

ಮಾನವನು ತನ್ನ ಆರೋಗ್ಯವನ್ನು ಕಾಪಾಡಿಕೊಳ್ಳುವದು ಅತಿ ಅವಶ್ಯಕವಾಗಿದೆ. ಒಮ್ಮೆ ನಮ್ಮ ಆರೋಗ್ಯವು ಕೆಟ್ಟುಹೋದರೆ ಅದನ್ನು ಮತ್ತೆ ಸರಿಪಡಿಸುವದು ಅಸಾಧ್ಯ ಎಂದು ಹೇಳಬಹುದು. ಅದಕ್ಕಾಗಿ ನಿಯಮಿತವಾದ ಯೋಗ ಮತ್ತು ವ್ಯಾಯಾಮ, ಸತ್ವಭರಿತ ಆಹಾರದ ಸೇವನೆ, ಉತ್ತಮವಾದ ಹವ್ಯಾಸಗಳು, ಸದಾ ಕಾರ್ಯತತ್ಪರರಾಗಿರುವದು ಅವಶ್ಯಕವಾಗಿದೆ.

**ಮೇಲೆ ಕೊಟ್ಟ ಅಂಶಗಳನ್ನು ಸರಿಯಾಗಿ ಓದಿ, ನಿಮ್ಮ ಅನಿಸಿಕೆಗಳನ್ನು ಹೇಳುತ್ತ, ಕಿರಿಯ (ಚಿಕ್ಕ) ಸಹೋದರನಿಗೆ ಆರೋಗ್ಯದ ಮಹತ್ವವನ್ನು ತಿಳಿಸುತ್ತ ಪತ್ರ ಬರೆಯಿರಿ.**

**ಪ್ರ. 18. ಕೆಳಗಿನ ಪರಿಚ್ಛೇದದ ಸಹಾಯದಿಂದ ಯಾವುದೇ ಒಂದು ಪತ್ರ ಬರೆಯಿರಿ.**

ನಿಮ್ಮ ಮನೆ ಇರುವ ಭಾಗದಲ್ಲಿ ಅಡುಗೆಯ ಗ್ಯಾಸ್ ಪೈಪುಗಳನ್ನು ಹಾಕಲಾಗುತ್ತಿದೆ. ಪ್ರತಿಯೊಂದು ಮನೆಗೆ, ಇನ್ನು ಮೇಲೆ ಪೈಪುಗಳಿಂದಲೇ ಗ್ಯಾಸಿನ ಸರಬರಾಜು ಆಗಲಿದೆ. ಅದರಿಂದಾಗಿ ಇನ್ನು ಮೇಲೆ ಗ್ಯಾಸ್ ಎಂದು ಮುಗಿಯುತ್ತದೆಯೋ ? ಬೇರೆ ಸಿಲಿಂಡರು ಯಾವಾಗ ಸಿಗುವುದೋ? ಮನೆಗೆ ಅತಿಥಿಗಳು ಬಂದಾಗ ಗ್ಯಾಸ್ ಮುಗಿದು ಹೋದರೆ ಏನು ಮಾಡುವುದು? ನಮಗೆ ಸಿಲಿಂಡರು ಬೇಕಾದಾಗಲೇ ಗ್ಯಾಸ ಅಂಗಡಿಯವರು, ಕೆಲಸಗಾರರು ಮುಷ್ಕರದ ಮೇಲೆ ಹೋಗಲಿಕ್ಕಿಲ್ಲವಲ್ಲ?ಎಂಬ ಸಾಕಷ್ಟು ಪ್ರಶ್ನೆಗಳು ಏಳುವದು ನಿಂತು ಹೋಗಲಿದೆ. ಇನ್ನು ಮುಂದೆ 24 ಘಂಟೆ ಹನ್ನೆರೆಡು ತಿಂಗಳು ಗ್ಯಾಸ್ ಪೂರೈಕೆಗೆ ಯಾವುದೇ ತೊಂದರೆ ಇಲ್ಲದೆ ಸಿಗಲಿದೆ.

**ಈ ತರಹದ ಏರ್ಪಾಡು ಮಾಡಿಕೊಟ್ಟ ನಿಮ್ಮ ಭಾಗದ ನಗರ ಸೇವಕ / ಸೇವಕಿಗೆ ಧನ್ಯವಾದಗಳನ್ನು ತಿಳಿಸುವ ಒಂದು ಪತ್ರ ಬರೆಯಿರಿ. ಮೇಲಿನ ಅಂಶಗಳನ್ನು ಸೇರಿಸಿ, ಸ್ವತಃ ನಿಮ್ಮ ಭಾವನೆಗಳನ್ನು ವ್ಯಕ್ತಪಡಿಸಿರಿ. 4**

**ಅಥವಾ**

**ಮೇಲಿನ ಸುದ್ದಿಯನ್ನು ನಿಮ್ಮ ಅಕ್ಕನಿಗೆ ತಿಳಿಸಿ ಒಂದು ಪತ್ರ ಬರೆಯಿರಿ. ಇನ್ನು ಮುಂದೆ ನಿಮ್ಮ ತಾಯಿಗೆ ಹೇಗೆ ಸುಖವಾಗಿ ಇರಲು ಸಾಧ್ಯ ಎಂಬುದನ್ನು ಬರೆಯಿರಿ. ಮನೆಗೆ ಗ್ಯಾಸ್ ಸಿಲಿಂಡರ ಬರಲಿದೆ, ಮನೆಯಲ್ಲಿ ಯಾರಾದರೂ ಇರಲೇಬೇಕು. ಇಲ್ಲದಿದ್ದರೆ ಸಿಲಿಂಡರ ಸಿಗಲಿಕ್ಕಿಲ್ಲ ಎಂಬ ಭಯ ತಾಯಿಗೆ ಬೇಡ. ಅಡುಗೆ ಮಾಡುವಾಗಲೇ ಗ್ಯಾಸ್ ಮುಗಿದು ಹೋಗಲಿಕ್ಕಿಲ್ಲ ಎಂಬ ದುಗುಡ ಇನ್ನು ಮೇಲೆ ಇಲ್ಲ ಎನ್ನುವ ನಿಮ್ಮ ಭಾವನೆಗಳನ್ನು ವ್ಯಕ್ತಪಡಿಸಿರಿ.**

**ಪ್ರ. 19. ಕೆಳಗೆ ಕೊಟ್ಟ ಅಂಶಗಳನ್ನು ಆದರಿಸಿ ಕಥೆ ಪೂರ್ಣ ಮಾಡಿ ಯೋಗ್ಯ ತಲೆಬರಹ ನೀಡಿ ಕಥೆಯ ತಾತ್ಪರ್ಯವನ್ನು ಬರೆಯಿರಿ.** **4**

ಒಂದು ಆನೆ ............ ಸಮೀಪದ ಗದ್ದೆಯಲ್ಲಿ ಕಬ್ಬು ತಿನ್ನಲು ............... ನರಿಯೊಂದು ಅಲ್ಲಿಗೆ ಬಂದಿತು. ಅವೆರೆಡು ............... ಆದವು. ................ ಚೆನ್ನಾಗಿ ಬೆಳೆದ ................. ನರಿ ಹೊಟ್ಟೆ ತುಂಬ ತಿಂದಿತು. ................ ಇನ್ನು ಹೊಟ್ಟೆ ತುಂಬಿರಲಿಲ್ಲ, .................. ಮಾತ್ರ ತಿಂದಿತು. ......... ಕೂಗಿತು....... ಮಾಲಿಕ ಬಂದನು. ನರಿಯು ಓಡಿ ಹೊಯಿತು. ಆನೆಯು ಸಿಕ್ಕು ಬಿದ್ದು ........... ತಿಂದಿತು.

**ಪ್ರ.20. ಕೆಳಗಿನ ಮಾಹಿತಿಯನ್ನು ಕನ್ನಡದಲ್ಲಿ ಅನುವಾದಿಸಿರಿ.** (4)

1) Tha temperature is very high. Everyone should take care when they get out of the house. Use a cap or a scarf. Drink plenty of water. Do not eat road-side food or fruits.

2) Friendship is very important in one'life. If we have good friends, then our life will be good. Frrinds always help us in our studies and in our difficult times. A friend who is always there for us he/she is real friend.

3) The Tajmahal at Agra is a very beautiful building. It has been built with white marble. There are four pillars one in each corner. The building has the tomb of Mumtaj. Her husband Shahajahan, built it in her memory. In moonlight the beauty of this building reaches it's hight.

**ಬರವಣಿಗೆಯ ಕೌಶಲ್ಯಗಳು:**

**ಪ್ರ. 21. ಕೆಳಗಿನವುಗಳಲ್ಲಿ ಯಾವುದೇ ಒಂದನ್ನು ಬರೆಯಿರಿ.** (4)

**i) ಕೆಳಗಿನ ಅಂಶಗಳನ್ನು ಬಳಸಿಕೊಂಡು, ನಿಮ್ಮ ವಿಚಾರಗಳನ್ನೂ ಸೇರಿಸಿ ಕಥೆಯನ್ನು ಪೂರ್ಣ ಮಾಡಿರಿ.**

ಮನೋಹರ ಬಹಳ ಬುದ್ಧಿವಂತನಲ್ಲ. . . . . . . . . . . ಶಾಲೆಯ ಎಲ್ಲ ಪರೀಕ್ಷೆಗಳಲ್ಲಿ ಐವತ್ತರಿಂದ ಅರವತ್ತು ಪ್ರತಿಶತ . . . . . . . . . . ಕಷ್ಟಪಟ್ಟು ಓದಲು ಎಂದೂ ಹಿಮ್ಮೆಟ್ಟಲಿಲ್ಲ. . . . . . . . . ಚಾರ್ಟರ್ಡ ಅಕೌಂಟಂಟ ಆಗುವ ಗುರಿ . . . . . . . . . . . . . ತಂದೆ ಕಾರಕೂನರು, ತಾಯಿ ಬಟ್ಟೆ ಹೊಲಿಯುವ ಕೆಲಸ . . . . . . . . . . ಕ್ಲಾಸುಗಳಿಗೆ ಹೋಗುವಷ್ಟು ಆರ್ಥಿಕ ಸಾಮರ್ಥ್ಯವಿಲ್ಲ. . . . . . . . . . ಹಗಲು ರಾತ್ರಿ ಕಾಳಜಿಪೂರ್ವಕವಾಗಿ ಅಭ್ಯಾಸ. . . . . . . . . . . . . . ಗೆಳೆಯರ ಗುಂಪು . . . . . . . . . . . .

| |
|---|
| ಚರ್ಚೆ ಮಾಡುವುದು . . . . . . . ಒಬ್ಬರಿಗೊಬ್ಬರು ಪ್ರಶ್ನೆ ಕೇಳುವುದು . . . . . . . ಎಲ್ಲರೂ ಒಂದೇ ಸಲ ಎಂಟೂ ಪೇಪರಗಳನ್ನು ಬರೆದರು. . . . . . . . ಮನೋಹರ ಸಂಪೂರ್ಣ ಭಾರತದಲ್ಲಿ ಹತ್ತನೆಯ ರ್‍ಯಾಂಕ ಪಡೆದ. |

**ii) ಮನೋಹರನ ರಿಜಲ್ಟ ಬಂದ ನಂತರ ಅವರ ಮನೆಯಲ್ಲಿ, ಅವನು ಹಾಗೂ ಅವನ ತಂದೆ-ತಾಯಿಗಳಲ್ಲಿ ಆದ ಸಂಭಾಷಣೆಯನ್ನು ಬರೆಯಿರಿ.** ತಂದೆ -ತಾಯಿಯರು ಮಗನು ಕಷ್ಟಪಟ್ಟ, ತಿಳುವಳಿಕೆಯ ಬಗ್ಗೆ ಏನು ಹೇಳಿರಬಹುದು, ಅದಕ್ಕೆ ಮನೋಹರ ಹೇಗೆ ತನ್ನ ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸಿರಬಹುದು ಎಂಬುದರ ವಿಚಾರ ಮಾಡಿ ಬರೆಯಿರಿ.

**ಪ್ರ. 22. ಕೆಳಗಿನ ವರ್ತುಳದಲ್ಲಿ ಕೊಟ್ಟ ವಿವಿಧ ಬೆಳೆಗಳ ಅಂಕಿ-ಅಂಶಗಳನ್ನು ತಿಳಿದುಕೊಂಡು, ಕೂಲಂಕುಷವಾಗಿ ಅಭ್ಯಾಸ ಮಾಡಿ ಒಂದು ಪರಿಚ್ಛೇದವನ್ನು ತಯಾರಿಸಿರಿ.** **(4)**

1. ಭತ್ತ 2. ಗೋದಿ 3. ರಾಗಿ 4. ಸಜ್ಜೆ 5. ಗೋವಿನ ಜೋಳ 6.ಜೋಳ




- ಒಟ್ಟು ಎಷ್ಟು ಬೆಳೆಗಳನ್ನು ತೋರಿಸಲಾಗಿದೆ?
- ಅತೀ ಹೆಚ್ಚು ಹಾಗೂ ಅತೀ ಕಡಿಮೆ ಪ್ರಮಾಣದಲ್ಲಿ ಬೆಳೆಯುವ ಬೆಳೆಗಳು ಯಾವುವು?
- ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುವ ಎರಡು ಬೆಳೆಗಳ ಪ್ರತಿಶತದಲ್ಲಿ ಎಷ್ಟು ಭೇದವಿದೆ?
- ಅತೀ ಕಡಿಮೆ ಪ್ರಮಾಣದಲ್ಲಿ ಬೆಳೆಯುವ ಬೆಳೆಗಳು ಯಾವುವು? ಅವುಗಳಲ್ಲಿ ಶೇಕಡಾ ಅಂತರ ಎಷ್ಟು ಇದೆ?
- ಅತೀ ಕಡಿಮೆ ಹಾಗೂ ಅತೀ ಹೆಚ್ಚಿನ ಪ್ರಮಾಣದ ಬೆಳೆಗಳನ್ನು ಬಿಟ್ಟು ಯಾವ ಎರಡು ಬೆಳೆಗಳು ಎಷ್ಟು ಪ್ರತಿಶತ ಬೆಳೆಯುವವು? ಅವುಗಳ ಪ್ರತಿಶತದಲ್ಲಿ ಎಷ್ಟು ಅಂತರವಿದೆ?

**ಪ್ರ. 23. ಕೆಳಗಿನ ಮಾಹಿತಿ ಓದಿ ಒಂದು ಅಂದವಾದ ವರ್ತುಳಾಕೃತಿಯನ್ನು ಬಿಡಿಸಿರಿ. ಅಲ್ಲಿ ಕೊಟ್ಟ ಅರಣ್ಯಗಳ ಪ್ರತಿಶತ ವಿಭಾಗಗಳನ್ನು ಕೂಲಂಕುಷವಾಗಿ ಅಭ್ಯಸಿಸಿ ವರ್ತುಳಾಕೃತಿಯಲ್ಲಿ ತೋರಿಸಿರಿ. (4)**

1. ಸದಾ ನಿಮ್ನಹರಿತ 2. ಮುಳ್ಳುಕಂಟಿಗಳ 3. ಎಲೆಉದುರುವ 4. ಮ್ಯಾಂಗ್ರೊವ 5. ಸದಾಹರಿತ



ಮಹಾರಾಷ್ಟ್ರದಲ್ಲಿ ಸುಮಾರಾಗಿ ಐದು ಪ್ರಕಾರದ ಅರಣ್ಯಗಳು ಇವೆ. ಪೂರ್ವ ಮಹಾರಾಷ್ಟ್ರದಲ್ಲಿ ಒಟ್ಟು ಕ್ಷೇತ್ರದ 50%ದಷ್ಟು ಜಾಗದಲ್ಲಿ ನಿಮ್ನ ಸದಾಹರಿತ ಅರಣ್ಯಗಳಿದ್ದರೆ ಮರಾಠವಾಡಾ ವಿಭಾಗದಲ್ಲಿ 20%ಭಾಗ ಮುಳ್ಳುಕಂಟಿಗಳ ಅರಣ್ಯದಿಂದ ಆವೃತವಾಗಿದೆ. ಪಶ್ಚಿಮ ಕರಾವಳಿಯಲ್ಲಿ 5% ಮ್ಯಾಂಗ್ರೂವ ಅರಣ್ಯಗಳಿದ್ದರೆ, ಮರಾಠವಾಡಾ ಹಾಗೂ ಪಶ್ಚಿಮ ಕರಾವಳಿಯ ಮಧ್ಯಭಾಗದಲ್ಲಿ ಒಟ್ಟು ಕ್ಷೇತ್ರದ 10%ಭಾಗ ಸದಾಹರಿತ ಹಾಗೂ 15%ಭಾಗ ಎಲೆ ಉದುರುವ ಅರಣ್ಯಗಳಿಂದ ಆವೃತವಾಗಿದೆ. ಮಹಾರಾಷ್ಟ್ರದ ಹೆಚ್ಚು ಕ್ಷೇತ್ರದಲ್ಲಿ ನಿಮ್ನ ಸದಾಹರಿತ ಅರಣ್ಯಗಳಿದ್ದರೆ ಅತ್ಯಂತ ಕಡಿಮೆ ಕ್ಷೇತ್ರದಲ್ಲಿ ಮ್ಯಾಂಗ್ರೂವ ಅರಣ್ಯಗಳಿವೆ. ಮುಳ್ಳುಕಂಟಿಗಳ ಹಾಗೂ ಎಲೆ ಉದುರುವ ಅರಣ್ಯಗಳ ಪ್ರತಿಶತದಲ್ಲಿ ಬಹಳ ಕಡಿಮೆ ಅಂತರವಿದೆ.

**ಪ್ರ. 24. ಕೆಳಗಿನ ಪದಬಂಧದಿಂದ ಎಂಟು ಶಬ್ದಗಳನ್ನು ಹುಡುಕಿ ಬರೆಯಿರಿ. ಅದರ ಅಡಿಯಲ್ಲಿ ನೀಡಿದ ಸುಳಿವುಗಳ ಸಹಾಯದಿಂದ ಬರೆಯಿರಿ.**

ಕೌ ಚಿ ಸು ರಿ ಕ ಪ್ರೀ

ಣೆ ವ ರ ಣ ತ ನ ಸು ಖ

ವಿ ಕ್ಷ ಯೋ ಕಾ ಸಿ ಪ ಸು ತ್ತಾ ಯ ಕ್ಷ

ಧಿ ಕೇ ವೃ ಲ ರ ಸು ನ ಡು ಗು ತ್ತಿ

ಮ ಯು ದ್ಧ ಕಾ ಲ ರ ಕ ವು ಕ ಣ

ರಿ ಕ ರ ಲ ಮ ವ ಲ ದು ರ್ನಾ ತ

ಟೂ ಳಿ ಡ ಚು ರ್ತ ನಿ ಚ ಲಿ

ಷಿ ಹ ನು ಮಾ ನ ಟ

ಸ ಮಾ ನ ಫ

**ಮೇಲಿಂದ ಕೆಳಗೆ:**

i) ಬಹಳ ವಯಸ್ಸಾದ

ii) ಸದಾಕಾಲ/ಎಂದೆಂದಿಗೂ

iii) ಸುತ್ತಲೂ ಅಲೆಯುವುದು

iv) ಸಮಾಚಾರ

v) ಸ್ವಪ್ನ

**ಎಡದಿಂದ ಬಲಕ್ಕೆ:**

i) ಸಮರದ ಕಾಲ ii) ಮೈ ಥರ ಥರಗುಟ್ಟುವುದು

iii) ಮಾರುತಿ iv) ಕೆಟ್ಟ ವಾಸನೆ v) ಸರಿಸಮ

**ಅಥವಾ**

**i)** **ಕೆಳಗೆ ಕೊಟ್ಟ ಶಬ್ದದಿಂದ ಆರು ಅರ್ಥಪೂರ್ಣ ಶಬ್ದಗಳನ್ನು ತಯಾರಿಸಿರಿ:** ಪದವೀಧರನಾದನು.

**ii)** **ಈಜಾಟ –** ಈ ಶಬ್ದಕ್ಕೆ ಸಂಬಂಧಪಟ್ಟ ನಾಲ್ಕು ಶಬ್ದಗಳನ್ನು ಬರೆಯಿರಿ.

**ಪ್ರ.25. ನಕಾಶೆ ವಾಚನ ಮಾಡಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**




i. ಬಾಣದ ದಿಕ್ಕಿನಿಂದ ಬಂದರೆ ಶಾಲೆಗೆ ಬರುವಾಗ ಹೇಗೆ ಬರಬೇಕು? (1)

ii. ವಸಂತ ನಾಟ್ಯಗೃಹ ಯಾವದಿಕ್ಕಿನಲ್ಲಿ ಇದೆ? (1)

iii. ದಕ್ಷಿಣದಲ್ಲಿ ಯಾವ ದೊಡ್ಡ ಕಟ್ಟಡ ಇರುವುದು? (1)

iv. ಪ್ರಭಾತ ರಸ್ತೆಯಿಂದ ಕೆಳಗೆ ಹೋದರೆ ಯಾವ ರಸ್ತೆ ಬರುವುದು? (1)

**ಪ್ರ. 26. ಕೆಳಗಿನ ವರದಿಯ ಅಂಶಗಳನ್ನು ಓದಿ ಯಾವುದಾದರೂ ಒಂದು ಪತ್ರ ಬರೆಯಿರಿ.**

ಪುಣೆ: 8 ಜೂನ – ಇನ್ನು ಎರಡೇ ದಿನಗಳಲ್ಲಿ ಪುಣೆಯಲ್ಲಿ ಮಳೆ ಬೀಳಲು ಆರಂಭವಾಗಲಿದೆ. ನಗರಪಾಲಿಕೆಯ ಸದಸ್ಯರು ತಮ್ಮ ತಮ್ಮ ಪ್ರಭಾಗಗಳಲ್ಲಿಯ ಚರಂಡಿಯ ದುರಸ್ತಿ ಮಾಡಿಸಿದ್ದರೆ ಸರಿ, ಇಲ್ಲವಾದರೆ ರಸ್ತೆಗಳಲ್ಲಿ ನೀರು ನಿಂತು ಅಪಘಾತಗಳು ಆಗುವ ಸಂಭವವಿದೆ. ರಸ್ತೆಗಳಲ್ಲಿ ತಗ್ಗುಗಳು ನಿರ್ಮಾಣವಾಗಿ ವಾಹನ ನಡೆಸುವವವರ ಬೆನ್ನು ಕತ್ತುಗಳಲ್ಲಿ ನೋವು ಆಗಿ ಆರೋಗ್ಯ ಕೆಡುವ ಸಾಧ್ಯತೆಯಿದೆ.

ಎಲ್ಲ ಜನರೂ ಸಹ ಮಳೆಯಿಂದ ಸರಿಯಾದ ರಕ್ಷಣೆ ಆಗುವಂತೆ ಜಾಗರೂಕತೆ ವಹಿಸಬೇಕು. ನೀರನ್ನು ಕುದಿಸಿ, ಸೋಸಿ ಕುಡಿಯಬೇಕು. ಸಣ್ಣ ಮಕ್ಕಳು ನೆಗಡಿ, ಕೆಮ್ಮು ಮುಂತಾದ ಸಾಂಸರ್ಗಿಕ ರೋಗಗಳಿಗೆ ತುತ್ತಾಗುವರು. ಪಾಲಕರು ಮಕ್ಕಳ ಕಾಳಜಿಯನ್ನು ವಹಿಸಬೇಕು.

| |
|---|
| ಅ. ಮಳೆಗಾಲದಲ್ಲಿ ಮನೆಯಲ್ಲಿ ಹಾಗೂ ಮನೆಯಿಂದ ಹೊರಗೆ ಇರುವಾಗ ಯಾವ ಯಾವ ಜಾಗರೂಕತೆ ವಹಿಸಬೇಕು ಎಂಬುದರ ಬಗೆಗೆ ನಿಮ್ಮ ತಂಗಿಗೆ ಒಂದು ಪತ್ರ ಬರೆಯಿರಿ. |

**ಅಥವಾ**

ಬ. ನಿಮ್ಮ ಭಾಗದ ನಗರ ಸೇವಕರಿಗೆ ಒಂದು ಪತ್ರ ಬರೆದು ನಿಮ್ಮ ಭಾಗದ ಚರಂಡಿಯ ಹಾಗೂ ರಸ್ತೆಗಳ ಬಗೆಗೆ ವಿವರವಾಗಿ ತಿಳಿಸಿರಿ. ಆದಷ್ಟು ಬೇಗ ದುರಸ್ತಿಯ ಕೆಲಸ ಆದರೆ ಯಾವ ಯಾವ ದುರಂತಗಳಿಂದ ಜನರ ರಕ್ಷಣೆ ಆಗಬಲ್ಲದು ಎಂಬುದನ್ನು ಬರೆಯಿರಿ.

**ಪ್ರ. 27. ಅನುಭವ ಕಥನ**

**ಅ. "ಕರುಣಾಮಯಿ, ಶಿಸ್ತುಪ್ರಿಯ, ವೇಳೆಯ ಮಹತ್ವ ಅರಿತ ತಾಯಿ ಒಳ್ಳೆಯ ದೇಶದ ನಿರ್ಮಾಣ ಮಾಡುವಳು."**

**ಈ ನಾಣ್ಣುಡಿಯ ಆಧಾರದ ಮೇಲೆ ಉದಾಹರಣೆಗಳ ಸಹಿತ ನಿಮ್ಮ ಅನುಭವಗಳನ್ನು ಬರೆಯಿರಿ.** ಆದರ್ಶ ಮಹಿಳೆಯರು ತಮ್ಮ ಮಕ್ಕಳನ್ನು ಒಳ್ಳೆಯ ನಾಗರಿಕರಾಗಿ ಬೆಳೆಸಿದ ರೀತಿ, ಮಾಡಿದ ತ್ಯಾಗಗಳ ಸಂದರ್ಭಗಳನ್ನು ಬರವಣಿಗೆಯಲ್ಲಿ ಉಪಯೋಗ ಮಾಡಿರಿ.

**ಅಥವಾ**

**ಬ. ಮೇಲಿನ ವಿಷಯದ ಮೇಲೆ ನೀವು ಹಾಗೂ ನಿಮ್ಮ ಗೆಳೆಯ, ಗೆಳತಿಯೊಂದಿಗೆ ಆದ ಸಂಭಾಷಣೆ ಬರೆಯಿರಿ.** ಆಟ, ಚಲನಚಿತ್ರ, ಉದ್ಯಮ, ಡಾಕ್ಟರ, ಇತಿಹಾಸದಲ್ಲಿಯ ಸ್ತ್ರೀಯರು, ಇಂಜಿನಿಯರು, ಮಿಲಿಟರಿಯ, ಪೋಲೀಸು ಖಾತೆಯಲ್ಲಿಯ ಮಹಿಳೆಯರು, ಯಾವುದೇ ಕೆಲಸಕ್ಕೆ ಹೋಗಲಾರದ ಮಹಿಳೆಯರು ತಮ್ಮ ಮಕ್ಕಳನ್ನು ದೇಶದ ರಕ್ಷಣೆ ಮಾಡಲು ಪ್ರೇರೇಪಿಸಿದಂತಹವರೂ ಇರಬಹುದು. ನಿಮ್ಮ ಮನೆಗಳ ಅಕ್ಕ ಪಕ್ಕದಲ್ಲಿಯೂ ಮಕ್ಕಳಿಗೆ ಸರಿಯಾದ ದಾರಿ ತೋರಿ ಮನೆಗೆ, ಸಮಾಜಕ್ಕೆ ಹಾಗೂ ದೇಶಕ್ಕೆ ಒಳ್ಳೆಯದನ್ನು ಮಾಡಲು ದಾರಿ ತೋರಿದ ಮಹಿಳೆಯರು ಇರಬಹುದು. **ಅಂಥವರ ಕಾರ್ಯದ ಬಗ್ಗೆ ನಿಮ್ಮವಿಚಾರಗಳನ್ನೂ ಸೇರಿಸಿಕೊಂಡು ಸಂಭಾಷಣೆಯನ್ನು ಬರೆಯಿರಿ.**

**ಪ್ರ. 28. ಕೆಳಗಿನ ಪರಿಚ್ಛೇದವನ್ನು ಬಳಸಿಕೊಂಡು ಒಂದು ಪೋಸ್ಟರ(ಪ್ರಕಟಣೆ) ತಯಾರಿಸಿರಿ. 4**

ಮಾನವನ ದೈನಂದಿನ ಜೀವನದಲ್ಲಿ ಸ್ವಚ್ಛತೆಯು ಅತಿ ಮಹತ್ವದ್ದಾಗಿದೆ. ಸ್ವಚ್ಛತೆಯಲ್ಲಿ ಪರಿಸರ, ಶರೀರ, ಧರಿಸುವ ಬಟ್ಟೆಗಳ ಸ್ವಚ್ಛತೆ, ನೀರು, ಹವೆ ಮತ್ತು ಬಳಸುವ ಆಹಾರದಲ್ಲಿ ಸ್ವಚ್ಛತೆ ಬೇಕೇ ಬೇಕು. ಅದಕ್ಕಾಗಿ ನಾವು ನಮ್ಮ ಮನೆಯ ಸುತ್ತ ಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಡಬೇಕು. ರೋಗ, ಪ್ರತಿಬಂಧಕ ಔಷಧಗಳನ್ನು ಸಿಂಪಡಿಸಬೇಕು. ಸಂಗ್ರಹಿಸಿದ ಹೊಲಸನ್ನು ಊರಹೊರಗಡೆ ನಿರ್ಜನ ಪ್ರದೇಶದಲ್ಲಿ ಸಂಗ್ರಹ ಮಾಡಿಡಬೇಕು. ನಮ್ಮ ಮನೆ ಮುಂದಿನ ಚರಂಡಿಗಳನ್ನು ಆದಷ್ಟು ಸ್ವಇಚ್ಛೆಯಿಂದ ಸ್ವಚ್ಛಮಾಡಿಕೊಳ್ಳಬೇಕು. ಇದರಿಂದ ರೋಗ ಜಂತುಗಳು ಹುಟ್ಟುವಿಕೆಯನ್ನು ಕಡಿಮೆ ಮಾಡಬಹುದು. ಅಲ್ಲದೆ ನಾವೂ ಸಹ ನಿರೋಗಿಯಾಗಿ ಬದುಕಲು ಸಾಧ್ಯ ಎಂಬುದನ್ನು ಮನವರಿಕೆ ಮಾಡಿಕೊಡುತ್ತ ನಗರಪಾಲಿಕೆಯ ಅಧ್ಯಕ್ಷರಿಂದ ಪೋಸ್ಟರ ತಯಾರಿಸಿ, ಪ್ರಮುಖ ಬೀದಿಗಳಲ್ಲಿ ಲಗತ್ತಿಸಬೇಕಿದೆ.

**ಪ್ರ. 29. ಕೆಳಗಿನ ಅಂಶಗಳನ್ನು ಬಳಸಿ ಮತ್ತು ನಿಮ್ಮ ವಿಚಾರಗಳನ್ನೂ ಸೇರಿಸಿ ಕಥೆ ಬರೆಯಿರಿ. 4**

| |
|---|
| ಓರ್ವ ಬೇಟೆಗಾರ……………ಬೇಟೆಗೆ ಹೋದಾಗ ಒಂದೇ ಗೂಡಿನಲ್ಲಿ ಎರಡು ಗಿಳಿಮರಿಗಳು ದೊರೆತವು…………ಮನೆಗೆ ಬರುವಾಗ ಒಂದು ಗಿಳಿ ಮರಿಯನ್ನು ಊರ ಮುಂದಿನ ಆಶ್ರಮದ ಗುರುಗಳಿಗೆ ಕೊಟ್ಟ……….ಇನ್ನೊಂದು ಗಿಳಿ……..ಊರಲ್ಲಿರುವ ಕಸಾಯಿಖಾನೆ ಯಜಮಾನ ತೆಗೆದುಕೊಂಡು……….ಆಶ್ರಮದ ಗಿಳಿ ಜನರನ್ನು ಕಂಡಾಗ ………….ನಮಸ್ಕಾರ, ತಥಾಸ್ತು ಇಂತಹ ಒಳ್ಳೆಯ ಮಾತುಗಳು ಕೇಳಿಬಂದವು. ಆದರೆ ಕಸಾಯಿಖಾನೆಯ ಗಿಳಿ ಜನರನ್ನು ಕಂಡಾಗ ……………ಎಂಬ ಕಠೋರದ ಮಾತುಗಳು ಕೇಳುತ್ತಿದ್ದವು. |